# ॥ ವಿಷಯಾನುಕ್ರಮಣಿಕೆ ॥


| | | |
|---|---|---|
| ಒಟ್ಟು ಶ್ಲೋಕಗಳು | – | 1–122 |
| ಮಂಗಲಾಚರಣೆ, ಉಪೋದ್ಘಾತ | – | 1–10 |
| ಮನುಷ್ಯರ ಸಾಧಾರಣ ಧರ್ಮ | – | 11–122 |
| ಆಚಾರ್ಯರ ವಿಶೇಷ ಧರ್ಮ | – | 123–132 |
| ಆಚಾರ್ಯ ಪತ್ನಿಯ ವಿಶೇಷ ಧರ್ಮ | – | 133–134 |
| ಗೃಹಸ್ಥರ ವಿಶೇಷ ಧರ್ಮ | – | 135–156 |
| ರಾಜರ ವಿಶೇಷ ಧರ್ಮ | – | 157–158 |
| ಸುಮಂಗಲಿಯರ ವಿಶೇಷ ಧರ್ಮ | – | 159–162 |
| ವಿಧವಾ ಸ್ತ್ರೀಯರ ವಿಶೇಷ ಧರ್ಮ | – | 163–172 |
| ಸಧವಾ ಮತ್ತು ವಿಧವಾ ಸ್ತ್ರೀಯರ ಸಾಮಾನ್ಯ ಧರ್ಮ | – | 173–174 |
| ಬ್ರಹ್ಮಚಾರಿಗಳ ವಿಶೇಷ ಧರ್ಮ | – | 175–187 |
| ಸನ್ಯಾಸಿಗಳ ವಿಶೇಷ ಧರ್ಮ | – | 188–196 |
| ಬ್ರಹ್ಮಚಾರಿಗಳು ಮತ್ತು ಸಾಧುಗಳ ಸಾಮಾನ್ಯ ಧರ್ಮ | – | 197–202 |
| ಉಪಸಂಹಾರ | – | 203–212 |

# ॥ ಶಿಕ್ಷಾಪತ್ರೀ ॥

ತನ್ನ ಎಡಭಾಗದಲ್ಲಿ ರಾಧಾದೇವಿಯನ್ನೂ, ವಕ್ಷಸ್ಥಲದಲ್ಲಿ ಲಕ್ಷ್ಮಿಯನ್ನೂ ಧರಿಸಿರುವ ಬೃಂದಾವನ ವಿಹಾರಿಯಾದ ಶ್ರೀಕೃಷ್ಣನನ್ನು ಹೃದಯದಲ್ಲಿ ಧ್ಯಾನಿಸುತ್ತೇನೆ. ॥ 1 ॥

ವೃತ್ತಾಲಯದಲ್ಲಿರುವ 'ಸಹಜಾನಂದಸ್ವಾಮಿ' ಎಂಬ ನಾನು, ಅನೇಕ ದೇಶಗಳಲ್ಲಿರುವ ನನ್ನನ್ನು ಆಶ್ರಯಿಸಿದ ಜನರಿಗಾಗಿ 'ಶಿಕ್ಷಾಪತ್ರಿ'ಯನ್ನು ಬರೆಯುವೆನು. ॥ 2 ॥

ಧರ್ಮದೇವರ ಪುತ್ರರೂ, ನನ್ನ ಸಹೋದರರೂ ಆದ ರಾಮಪ್ರತಾಪ, ಇಚ್ಛಾರಾಮರ ಪುತ್ರರಾದ ಅಯೋಧ್ಯಾಪ್ರಸಾದ ಮತ್ತು ರಘುವೀರ ಇವರನ್ನು ದತ್ತುಪುತ್ರರನ್ನಾಗಿ ಸ್ವೀಕರಿಸಿ, ಎಲ್ಲ ಸತ್ಸಂಗದ ಜನರಿಗೋಸ್ಕರ ಆಚಾರ್ಯಪೀಠದಲ್ಲಿ ಸ್ಥಾಪಿಸಲಾಗಿದೆ. ॥ 3 ॥

ನಮ್ಮನ್ನು ಆಶ್ರಯಿಸಿದ ಮುಕುಂದಾನಂದ ಮೊದಲಾದ ನೈಷ್ಠಿಕಬ್ರಹ್ಮಚಾರಿಗಳು ಹಾಗೂ ಮಾಯಾರಾಮಭಟ್ಟ ಮೊದಲಾದ ಸಜ್ಜನ ಗೃಹಸ್ಥರೂ ॥ 4 ॥

ನನ್ನ ಶಿಷ್ಯತ್ವವನ್ನು ಸ್ವೀಕರಿಸಿದ ಎಲ್ಲ ಸುಮಂಗಲೀ ಮತ್ತು ಅಮಂಗಲೀ ಸ್ತ್ರೀಯರೂ, ಮುಕ್ತಾನಂದಾದಿ ಸಾಧುಗಳೂ– ॥ 5 ॥

ಇವರೆಲ್ಲರಿಗೂ ಮತ್ತು ಶಾಸ್ತ್ರಸಮ್ಮತವಾದ ಸ್ವಧರ್ಮವನ್ನು ರಕ್ಷಿಸುವ ಎಲ್ಲರಿಗೂ ನಾರಾಯಣಸ್ಮರಣೆಯೊಂದಿಗೆ ಕೂಡಿದ ನನ್ನ ಆಶೀರ್ವಾದಗಳನ್ನು ತಿಳಿಸಬೇಕು. ॥ 6 ॥

ಸಕಲ ಜೀವರಿಗೂ ಹಿತವನ್ನೇ ಕೊಡುವ ಈ ಶಿಕ್ಷಾಪತ್ರಿಯನ್ನು ಅದರ ಉದ್ದೇಶದೊಂದಿಗೆ, ಏಕಾಗ್ರವಾದ ಮನಸ್ಸಿನಿಂದ ಎಲ್ಲರೂ ಧರಿಸಬೇಕು. ॥ 7 ॥

ಪವಿತ್ರವಾದ ಶಾಸ್ತ್ರಗಳಲ್ಲಿ ಪ್ರತಿಪಾದಿತವಾದ ಸದಾಚಾರಗಳನ್ನು ಯಾವ ಮನುಷ್ಯರು ಪಾಲಿಸುವರೋ, ಅವರೆಲ್ಲರೂ ಇಹ–ಪರಲೋಕಗಳಲ್ಲಿ ಸುಖಿಯಾಗುವರು. ॥ 8 ॥

ಅವನ್ನು ಮೀರಿ ಬುದ್ಧಿಗೆಟ್ಟವರಾದ ಸ್ವೇಚ್ಛಾಚಾರಿಗಳು ಇಹ–ಪರಲೋಕಗಳಲ್ಲಿ ಮಹಾಕಷ್ಟಗಳನ್ನು ಅನುಭವಿಸುವರು. ॥ 9 ॥

ಆದ್ದರಿಂದ, ನನ್ನ ಶಿಷ್ಯರಾದ ನೀವೆಲ್ಲರೂ ಪ್ರೀತಿಯಿಂದ ಇದನ್ನು ಅನುಸರಿಸಿ ಬಹಳ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು. ॥ 10 ॥

ನನಗೆ ಸೇರಿದವರು, ಯಾವ ಪ್ರಾಣಿಗೂ, ಬಹಳ ಚಿಕ್ಕದಾದ ಹೇನು, ತಿಗಣೆ ಮುಂತಾದವುಗಳಿಗೂ ಸಹ ಯಾವ ಹಿಂಸೆಯನ್ನೂ ಎಂದೂ ಮಾಡಬಾರದು. ॥ 11 ॥

ದೇವತೆಗಳು, ಪಿತೃಗಳು, ಯಾಗಗಳು– ಇವುಗಳಿಗಾಗಿಯೂ ಕುರಿ ಮೊದಲಾದ ಪ್ರಾಣಿಗಳ ಹಿಂಸೆಯನ್ನು ಮಾಡಬಾರದು. ಏಕೆಂದರೆ ಅಹಿಂಸೆಯೇ ಮಹಾನ್ ಧರ್ಮ ಎಂದು ಹೇಳುವರು. ॥ 12 ॥

ಸ್ತ್ರೀಯರಿಗಾಗಲೀ, ಧನಕ್ಕಾಗಲೀ, ರಾಜಪ್ರಾಪ್ತಿಗಾಗಲೀ ಎಂದೂ, ಎಲ್ಲೂ, ಯಾವ ರೀತಿಯಲ್ಲೂ, ಯಾವ ಮನುಷ್ಯರಿಗೂ ಹಿಂಸೆಯನ್ನು ಮಾಡಬಾರದು. ॥ 13 ॥

ಪುಣ್ಯತೀರ್ಥಗಳಲ್ಲಿಯೂ ಆತ್ಮಹತ್ಯೆಯನ್ನು ಮಾಡಿಕೊಳ್ಳಬಾರದು. ಕೋಪದಿಂದಾಗಲೀ, ತಪ್ಪು ಕೆಲಸ ಮಾಡಿಬಿಟ್ಟ ಕಾರಣಕ್ಕಾಗಲೀ ಎಂದೂ ವಿಷಸೇವನೆ, ನೇಣು ಮುಂತಾದವುಗಳಿಂದಲೂ ಆತ್ಮಹತ್ಯೆ ಮಾಡಿಕೊಳ್ಳಬಾರದು. ॥ 14 ॥

ಎಂದೂ ಯಾಗದ ಪ್ರಸಾದಾದಿರೂಪದಲ್ಲೂ ಮಾಂಸವನ್ನು ಸರ್ವಥಾ ತಿನ್ನಬಾರದು. ದೇವತೆಗಳಿಗೆ ನಿವೇದಿತವಾಗಿದ್ದರೂ ಹೆಂಡ, ಸಾರಾಯಿ ಮುಂತಾದವುಗಳನ್ನು ಕುಡಿಯಬಾರದು. ॥ 15 ॥

ಅಕೃತ್ಯಗಳನ್ನು ಮಾಡಿದ್ದಕ್ಕಾಗಲೀ, ಕೋಪದಿಂದಾಗಲೀ, ತನ್ನ ಅಥವಾ ಇತರರ ಅವಯವಗಳನ್ನು ಶಸ್ತ್ರಾದಿಗಳಿಂದ ಕತ್ತರಿಸಬಾರದು. ॥ 16 ॥

ಧರ್ಮದ ಉದ್ದೇಶದಿಂದಲೂ ಯಾರೂ ಕಳ್ಳತನ ಮಾಡಬಾರದು. ಕಟ್ಟಿಗೆ, ಪುಷ್ಪ ಮುಂತಾದವುಗಳನ್ನು ಅದಕ್ಕೆ ಮಾಲೀಕರಿದ್ದರೆ, ಅವರ ಅನುಮತಿಯಿಲ್ಲದೇ ತೆಗೆದುಕೊಳ್ಳಬಾರದು. ॥ 17 ॥

ನನಗೆ ಸೇರಿದ ಪುರುಷರಾಗಲೀ, ಸ್ತ್ರೀಯರಾಗಲೀ ಹಾದರ ಮಾಡಬಾರದು. ಜೂಜು ಮುಂತಾದ ಚಾಳಿಯನ್ನು ಬಿಡಬೇಕು. ಭಂಗಿ ಮುಂತಾದ ಮಾದಕ ದ್ರವ್ಯವನ್ನು ಸೇವಿಸಬಾರದು. ॥ 18 ॥

ಯಾವನ ಅನ್ನವು ನಿಷಿದ್ಧವೋ ಅವನು ಬೇಯಿಸಿದ ಅನ್ನವನ್ನಾಗಲೀ, ನೀರನ್ನಾಗಲೀ ದೇವರ ಪ್ರಸಾದವಾದರೂ ಜಗನ್ನಾಥ ಕ್ಷೇತ್ರ ಬಿಟ್ಟು ಉಳಿದ ಕಡೆಯಲ್ಲಿ ಸ್ವೀಕರಿಸಬಾರದು. ॥ 19 ॥

ಸ್ವಾರ್ಥವನ್ನು ಸಾಧಿಸಲು ಯಾರ ಮೇಲೂ ಸುಳ್ಳಾದ ಅಪವಾದವನ್ನು ಆರೋಪಿಸಬಾರದು. ಕೆಟ್ಟ ಮಾತುಗಳನ್ನು ಎಂದೂ, ಎಲ್ಲೂ ಆಡಬಾರದು. ॥ 20 ॥

ದೇವತೆಗಳು, ಪುಣ್ಯತೀರ್ಥಗಳು, ವಿಪ್ರರು(ಬ್ರಾಹ್ಮಣರು), ಸತೀಯರು, ಸತ್ಪುರುಷರು ಮತ್ತು ವೇದಗಳು ಇವುಗಳ ನಿಂದನೆಯನ್ನು ಎಲ್ಲೂ ಹೇಳಲೂಬಾರದು, ಕೇಳಲೂಬಾರದು. ॥ 21 ॥

ಹೆಂಡ ಮತ್ತು ಮಾಂಸವನ್ನು ಯಾವ ದೇವತೆಗೆ ನಿವೇದನ ಮಾಡುವರೋ, ಆ ದೇವತೆಗಳಿಗೆ ನಿವೇದಿತವಾದ ಅನ್ನಾದಿಗಳನ್ನು ತಿನ್ನಬಾರದು. ॥ 22 ॥

ದಾರಿಯಲ್ಲಿ ಶಿವಾಲಯ ಮುಂತಾದ ದೇವಮಂದಿರಗಳನ್ನು ಕಂಡರೆ ಪ್ರೀತಿಯಿಂದ ನಮಸ್ಕರಿಸಿ, ದರ್ಶನ ಮಾಡಬೇಕು. (ಅಲಕ್ಷಿಸಿ ಹೋಗಬಾರದು) ॥ 23 ॥

ಯಾವನೇ ಆಗಲೀ ತನ್ನ ವರ್ಣ ಮತ್ತು ಆಶ್ರಯ ಧರ್ಮವನ್ನು ಬಿಡಬಾರದು. ಇತರ ಧರ್ಮಗಳನ್ನೂ ಪಾಷಂಡಿಗಳು ಏರ್ಪಡಿಸಿದ ಧರ್ಮವನ್ನೂ ಆಚರಿಸಬಾರದು. ॥ 24 ॥

ಯಾವನ ಮಾತನ್ನು ಕೇಳಿದರೆ ಕೃಷ್ಣಭಕ್ತಿಯಿಂದಲೋ, ಸ್ವಧರ್ಮ ನಿಷ್ಠೆಯಿಂದಲೋ ಜಾರುವ ಸಂಭವ ಉಂಟೋ ಅಂತಹವನ ಸತ್ಸಂಗ ವಾರ್ತೆಯನ್ನೂ ಕೇಳಬಾರದು. ॥25॥

ಸತ್ಯವಾದರೂ, ತನಗೋ ಅಥವಾ ಪರರಿಗೋ ದ್ರೋಹವಾಗುವುದಾದರೆ ಅದನ್ನು ಹೇಳಬಾರದು. ಕೃತಘ್ನರ ಸಂಗ ಮಾಡಬಾರದು. ಲಂಚ–ರಿಶ್ವತ್ ಸ್ವೀಕರಿಸಬಾರದು. ॥ 26 ॥

ಕಳ್ಳರು, ಪಾಪಿಗಳು, ಮದ್ಯಾದಿವ್ಯಸನಿಗಳು, ಪಾಷಂಡಿಗಳು, ಕಾಮಾಸಕ್ತರು ಮತ್ತು ಜನವಂಚಕರು ಇವರ ಸಂಪರ್ಕ ಮಾಡಬಾರದು. ॥ 27 ॥

ಭಕ್ತಿ ಅಥವಾ ಜ್ಞಾನವನ್ನು ಆಶ್ರಯಿಸಿಕೊಂಡಿದ್ದು, ಸ್ತ್ರೀಯರ ಹಾಗೂ ಐಶ್ವರ್ಯದ ನಾನಾ ಆಸ್ವಾದನೆಯಲ್ಲಿ ನಿರತರಾಗಿ ಪಾಪದ ಕೆಲಸದಲ್ಲಿ ಇಳಿಯುವವರ ಜೊತೆ ಸೇರಬಾರದು. ॥ 28 ॥

ಶ್ರೀಕೃಷ್ಣ(ಭಗವಂತ)ನನ್ನು ಮತ್ತು ಭಗವಂತನ ಅವತಾರಗಳನ್ನು ಯುಕ್ತಿಗಳಿಂದ ಖಂಡಿಸಿ ಬರೆಯುವ ಶಾಸ್ತ್ರಗಳನ್ನು ಎಂದೂ ಗೌರವಿಸಬಾರದು. ॥29॥

ವಸ್ತ್ರದಿಂದ ಪರಿಶುದ್ಧಿ ಮಾಡದ ಪಾನೀಯ ಮತ್ತು ನೀರನ್ನು ಕುಡಿಯಬಾರದು. ಸೂಕ್ಷ್ಮಜಂತುಗಳಿರುವ ನೀರಿನಿಂದ ಸ್ನಾನಾದಿಗಳನ್ನು ಮಾಡಬಾರದು. ॥ 30 ॥

ಔಷಧವಾದರೂ, ಹೆಂಡ ಮತ್ತು ಮಾಂಸದಿಂದ ಕೂಡಿದ್ದುದನ್ನೂ, ಶೀಲ–ಸ್ವಭಾವ ತಿಳಿಯದ ವೈದ್ಯನು ಕೊಟ್ಟ ಔಷಧವನ್ನೂ ಸೇವಿಸಬಾರದು. ॥ 31 ॥

ಲೋಕ ಮತ್ತು ಶಾಸ್ತ್ರದಿಂದ ನಿಷಿದ್ಧವಾದ ಜಾಗಗಳಲ್ಲಿ ಮಲ–ಮೂತ್ರ ವಿಸರ್ಜನೆ ಮತ್ತು ಉಗುಳುವುದುನ್ನು ಎಂದೂ ಮಾಡಬಾರದು. ॥ 32 ॥

ಬಾಗಿಲು ಇಲ್ಲದ ಅಡ್ಡ ದಾರಿಯಿಂದ ಬರುವುದು ಮತ್ತು ಹೋಗುವುದನ್ನು ಮಾಡಬಾರದು. ಯಜಮಾನನಿರುವ ಮನೆಯಲ್ಲಿ ಅವನ ಅನುಮತಿಯಿಲ್ಲದೇ ವಾಸಿಸಬಾರದು. ॥ 33 ॥

ಪುರುಷರು ಸ್ತ್ರೀಯರ ಬಾಯಿಂದ ಜ್ಞಾನದ ವಿಷಯ ಹಾಗೂ ಕಥಾ ಪ್ರಸಂಗವನ್ನು ಕೇಳಬಾರದು. ಸ್ತ್ರೀಯರು ಮತ್ತು ರಾಜರು ಮತ್ತು ಅವರಿಗೆ ಸೇರಿದವರೊಂದಿಗೆ ವಿವಾದಾದಿಗಳನ್ನು ಮಾಡಬಾರದು. ॥ 34 ॥

ಗುರುಗಳಿಗೂ, ದೊಡ್ಡವರಿಗೂ ಅಪಮಾನ ಮಾಡಬಾರದು. ಲೋಕದಲ್ಲಿ ಪ್ರಸಿದ್ಧಿ ಪಡೆದ ವಿದ್ವಾಂಸರಿಗೂ ಮತ್ತು ಶಸ್ತ್ರಧಾರಿಗಳಿಗೂ ಅಪಮಾನ ಮಾಡಬಾರದು. ॥ 35 ॥

ಯಾವ ಕಾರ್ಯವನ್ನೂ ಯೋಚಿಸದೇ ಮಾಡಬಾರದು. (ಆದರೆ), ಧರ್ಮವನ್ನು ತ್ವರೆಯಿಂದ ಮಾಡಬೇಕು. ತಾನು ಕಲಿತ ವಿದ್ಯೆಯನ್ನು ಮತ್ತೊಬ್ಬರಿಗೆ ಬೋಧಿಸಬೇಕು. ಸದಾ ಸತ್ಸಂಗ ಮಾಡಬೇಕು. ॥ 36 ॥

ಗುರುಗಳು, ದೇವರು ಮತ್ತು ರಾಜರು – ಇವರನ್ನು ಸಂದರ್ಶಿಸಲು ಹೋಗುವಾಗ ಬರೀ ಕೈಯಿಂದ ಹೋಗಬಾರದು. ವಿಶ್ವಾಸದ್ರೋಹವನ್ನೂ, ತನ್ನ ಬಾಯಿಂದಲೇ ತನ್ನ ಪ್ರಶಂಸೆಯನ್ನೂ ಮಾಡಬಾರದು. ॥ 37 ॥

ಯಾವ ವಸ್ತ್ರವನ್ನು ಧರಿಸಿದರೆ ತನ್ನ ಅವಯವಗಳು ಕಾಣುವವೋ, ಸಾಧುಗಳು ನಿಂದಿಸತಕ್ಕ ಅಂತಹ ಸೂಕ್ಷ್ಮ ವಸ್ತ್ರವನ್ನು ನನಗೆ ಸೇರಿದವರು ಧರಿಸಬಾರದು. ॥ 38 ॥

ಧರ್ಮವಿಲ್ಲದ ದೇವರ (ಶ್ರೀಕೃಷ್ಣನ) ಭಕ್ತಿಯನ್ನು ಸರ್ವಥಾ ಮಾಡಬಾರದು. ಮೂಢರು ನಿಂದಿಸುವರೆಂಬ ಭಯದಿಂದ ಭಗವಂತನ ಸೇವೆಯನ್ನು ತ್ಯಜಿಸಬಾರದು. ॥ 39 ॥

ಉತ್ಸವಾದಿದಿನಗಳಲ್ಲಿ ಶ್ರೀಕೃಷ್ಣನ (ದೇವರ) ಮಂದಿರಕ್ಕೆ ಬಂದಿರುವ ಪುರುಷರು ಸ್ತ್ರೀಯರನ್ನೂ, ಸ್ತ್ರೀಯರು ಪುರುಷರನ್ನೂ ಮುಟ್ಟಬಾರದು. ॥ 40 ॥

ಶ್ರೀಕೃಷ್ಣನ (ವೈಷ್ಣವ) ದೀಕ್ಷೆಯನ್ನು ಗುರುವಿನಿಂದ ಪಡೆದ ಬ್ರಾಹ್ಮಣರು ಮುಂತಾದವರು, ಕೊರಳಲ್ಲಿ ಎರಡೆಳೆಯ ತುಳಸೀಮಾಲೆಯನ್ನೂ, ಹಣೆ ಮುಂತಾದ ಜಾಗಗಳಲ್ಲಿ ಊರ್ಧ್ವಪುಂಡ್ರವನ್ನೂ ಸದಾ ಧರಿಸಬೇಕು. ॥ 41 ॥

ಊರ್ಧ್ವಪುಂಡ್ರವನ್ನು ಗೋಪಿಚಂದನದಿಂದಲೋ ಅಥವಾ ಭಗವಂತನ ಪೂಜೆಗೆ ಉಪಯೋಗಿಸಿದ ಕೇಸರಿ ಮುಂತಾದವುಗಳಿಂದ ಕೂಡಿದ ಗಂಧದಿಂದಲೋ ಧರಿಸಬೇಕು. ॥ 42 ॥

ಆ ಪುಂಡ್ರದ ಮಧ್ಯದಲ್ಲಿ ಅದೇ ದ್ರವ್ಯದಿಂದಲೋ ಅಥವಾ ರಾಧೆ ಮತ್ತು ಲಕ್ಷ್ಮಿಯ ಪ್ರಸಾದರೂಪವಾದ ಕುಂಕುಮದಿಂದಲೋ, ವರ್ತುಲಾಕಾರದ ಬಿಂದುವನ್ನು ಧರಿಸಬೇಕು. ॥ 43 ॥

ಶ್ರೀಕೃಷ್ಣಭಕ್ತರಾದ ಸಚ್ಛೂದ್ರರೂ ಬ್ರಾಹ್ಮಣಾದಿಗಳಂತೆಯೇ ತುಳಸೀಮಾಲೆ ಮತ್ತು ಊರ್ಧ್ವ ಪುಂಡ್ರವನ್ನು ಧರಿಸಬೇಕು, ಸ್ವಧರ್ಮದಲ್ಲಿ ನಿಷ್ಠೆಯಿಂದ ಇರಬೇಕು. ॥ 44 ॥

ಸಚ್ಛೂದ್ರರಲ್ಲದ ಕೃಷ್ಣಭಕ್ತರು ಗಂಧದಿಂದ ಮಾಡಿದ ಮಣಿಗಳ ಮಾಲೆಯನ್ನು ಕಂಠದಲ್ಲಿ ಧರಿಸಬೇಕು ಮತ್ತು ಹಣೆಯಲ್ಲಿ ಬಿಂದುವನ್ನು ಮಾತ್ರ ಧರಿಸಬೇಕು. ॥ 45 ॥

ತ್ರಿಪುಂಡ್ರ ಮತ್ತು ರುದ್ರಾಕ್ಷಿಧಾರಣ ಯಾರಿಗೆ ಕುಲಕ್ರಮದಲ್ಲಿ ಬಂದಿರುವುದೋ, ಅಂತಹ ಬ್ರಾಹ್ಮಣಾದಿಗಳು ನನಗೆ ಸೇರಿದವರಾದರೂ ಅವನ್ನು ಬಿಡಬಾರದು. ॥ 46 ॥

ಶ್ರೀಮನ್ನಾರಾಯಣನು ಮತ್ತು ಪರಮಶಿವನು ಇಬ್ಬರೂ ಒಂದೇ ಎಂದು ತಿಳಿಯಬೇಕು. ಏಕೆಂದರೆ ಅವರಿಬ್ಬರನ್ನೂ ಬ್ರಹ್ಮವೆಂದು ವೇದಗಳು ಸಾರುತ್ತವೆ. ॥ 47 ॥

ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವ ಆಪದ್ಧರ್ಮಗಳನ್ನು ನನಗೆ ಸೇರಿದವರು ಎಂದೂ ಮುಖ್ಯ ಧರ್ಮವನ್ನಾಗಿ ಸ್ವೀಕರಿಸಬಾರದು. (ನಿರಂತರವಾಗಿ ಆಚರಿಸಬಾರದು) ॥ 48 ॥

ನನಗೆ ಸೇರಿದವರು ಪ್ರತಿದಿನವೂ ಸೂರ್ಯೋದಯಕ್ಕೆ ಮೊದಲೇ ಎದ್ದು ಶ್ರೀಕೃಷ್ಣನ (ದೇವರ) ಸ್ಮರಣೆಯನ್ನು ಮಾಡಿದ ಮೇಲೆ ಶೌಚಾದಿಗಳನ್ನು ಮಾಡಬೇಕು. ॥ 49 ॥

(ಅನಂತರ) ಒಂದು ಕಡೆಯಲ್ಲಿ ಕುಳಿತು ಹಲ್ಲುಗಳನ್ನು ಉಜ್ಜಬೇಕು. (ನಂತರ) ಶುದ್ಧವಾದ ನೀರಿನಿಂದ ಸ್ನಾನ ಮಾಡಿ, ಮಡಿಯಾದ ಶುದ್ಧ ವಸ್ತ್ರವನ್ನು ಧರಿಸಬೇಕು. ॥ 50 ॥

ಅನಂತರ ಶುದ್ಧವಾದ ಜಾಗದಲ್ಲಿ, ಶುದ್ಧವಾದ ಆಸನದಲ್ಲಿ, ಪೂರ್ವ ಅಥವಾ ಉತ್ತರಮುಖವಾಗಿ ಕುಳಿತು, ಒಂದಕ್ಕೊಂದು ಮಿಶ್ರವಾಗದಂತೆ ಆಚಮನವನ್ನು ಮಾಡಬೇಕು. ॥ 51 ॥

(ನಂತರ)ಪುರುಷರು ಮಾತ್ರ ಬಿಂದುವಿನೊಂದಿಗೆ ಊರ್ಧ್ವಪುಂಡ್ರವನ್ನು ಧರಿಸಬೇಕು. ಸುಮಂಗಲಿಯರು ಹಣೆಯಲ್ಲಿ ಕುಂಕುಮದಿಂದ ಬಿಂದುವನ್ನು ಧರಿಸಬೇಕು. ॥ 52 ॥

ವಿಧವೆಯರು ಹಣೆಯಲ್ಲಿ ಊರ್ಧ್ವಪುಂಡ್ರ ಅಥವಾ ಬಿಂದುವನ್ನು ಧರಿಸಬಾರದು. ನಂತರ ನನಗೆ ಸೇರಿದವರೆಲ್ಲರೂ ಶ್ರೀಕೃಷ್ಣನ ಮಾನಸ ಪೂಜೆಯನ್ನು ಮಾಡಬೇಕು. ॥ 53 ॥

ನಂತರ ರಾಧಾಕೃಷ್ಣನ ಚಿತ್ರರೂಪವಾದ ಮೂರ್ತಿಗೆ ಭಕ್ತಿಯಿಂದ ನಮಸ್ಕರಿಸಿ, ಯಥಾಶಕ್ತಿ ಅವರ ಮಂತ್ರವನ್ನು ಜಪಿಸಿ, ನಂತರ ವ್ಯವಹಾರಗಳನ್ನು ಮಾಡತಕ್ಕದ್ದು. ॥54॥

ಅಂಬರೀಷ ಚಕ್ರವರ್ತಿಯಂತೆ ತನ್ನನ್ನು ಪರಮಾತ್ಮನಿಗೆ ಸಮರ್ಪಿಸಿ ಕೊಂಡಿರುವವರೂ, ಅವರು ಹಿಂದೆ ಹೇಳಿದ ಕ್ರಮದಲ್ಲಿ ಮಾನಸಪೂಜಾ ಪರ್ಯಂತ ಎಲ್ಲವನ್ನೂ ಮಾಡಬೇಕು. ॥ 55 ॥

ಅವರು ಶಿಲೆ ಮತ್ತು ಪಂಚಲೋಹ ನಿರ್ಮಿತ ಮೂರ್ತಿಯನ್ನೋ ಅಥವಾ ಸಾಲಿಗ್ರಾಮಮೂರ್ತಿಯನ್ನೋ ದೊರಕಿದ ಸಾಧನಗಳಿಂದ ಪೂಜಿಸಿ, ಭಗವಂತನ ಅಷ್ಟಾಕ್ಷರಮಂತ್ರವನ್ನು ಜಪಿಸಬೇಕು. ॥ 56 ॥

ಅನಂತರ ಯಥಾಸಂಭವ ಭಗವಂತನ ಸ್ತೋತ್ರಪಾಠಗಳನ್ನು ಹೇಳಬೇಕು. ಸಂಸ್ಕೃತ ತಿಳಿಯದವರು ಭಗವಂತನ ನಾಮ ಸಂಕೀರ್ತನೆಯನ್ನು ಮಾಡಬೇಕು. ॥ 57 ॥

ಅನಂತರ ಅನ್ನ ಮೊದಲಾದವನ್ನು ಭಗವಂತನಿಗೆ ನೈವೇದ್ಯ ಮಾಡಿ, ಅದನ್ನು ಪ್ರಸಾದವಾಗಿ ಸ್ವೀಕರಿಸಬೇಕು. ಸದಾ ಭಗವಂತನಲ್ಲಿ ಪ್ರೀತಿಯಿಂದ ಅವನ ಸೇವೆಯನ್ನು ಮಾಡಬೇಕು. ॥ 58 ॥

ಗುಣಾತೀತನಾದ ಭಗವಂತನ ಭಕ್ತರಾದ ಕಾರಣ ಭಕ್ತರೂ ಗುಣಾತೀತರೇ ಆಗುತ್ತಾರೆ. ಇಂತಹವರು ಮಾಡುವುದರಿಂದ, ಅವರ ಕ್ರಿಯೆಗಳೆಲ್ಲವೂ ಗುಣಾತೀತವೇ ಆಗುತ್ತವೆ. ॥ 59 ॥

ಇಂತಹ ಭಕ್ತರು ಭಗವಂತನಿಗೆ ಅರ್ಪಿಸದೇ ನೀರನ್ನೂ ಕುಡಿಯಬಾರದು. ಪತ್ರ, ಫಲ, ಕಂದ ಇತ್ಯಾದಿಗಳನ್ನೂ ಭಗವಂತನಿಗೆ ಅರ್ಪಿಸದೇ ತಿನ್ನಬಾರದು. ॥ 60 ॥

ಯಾರೇ ಆಗಲೀ, ವಾರ್ಧಕ್ಯ ಅಥವಾ ದೊಡ್ಡ ಅನಾರೋಗ್ಯಾದಿ ನಿಮಿತ್ತ ತೀರ ಅಶಕ್ತರಾದಾಗ ತನ್ನ ಪೂಜ್ಯ ಮೂರ್ತಿಯನ್ನು ಅರ್ಹನಾದ ಭಕ್ತನಿಗೆ ಒಪ್ಪಿಸಿ, ಯಥಾಶಕ್ತಿ ಮಾನಸಾದಿಪೂಜೆಗಳಿಂದ ಇರಬೇಕು. ॥ 61 ॥

ಆಚಾರ್ಯರು ಕೊಟ್ಟ ಮೂರ್ತಿಯನ್ನು ಅಥವಾ ಅವರಿಂದ ಪ್ರತಿಷ್ಠಿತವಾದ ಮೂರ್ತಿಯನ್ನು ಮಾತ್ರ ಪೂಜಿಸಬೇಕು. ಬೇರೆ ಭಗವನ್ಮೂರ್ತಿಗಳಿಗೆ ವಂದನ ಮಾತ್ರ ಮಾಡಬೇಕು. ॥ 62 ॥

ಎಲ್ಲರೂ ಪ್ರತಿದಿನವೂ ಸಾಯಂಕಾಲ ಭಗವಂತನ ಮಂದಿರಕ್ಕೆ ಹೋಗಬೇಕು. ಅಲ್ಲಿ ಉಚ್ಚಸ್ವರದಿಂದ ಭಗವಂತನ ನಾಮ ಸಂಕೀರ್ತನವನ್ನು ಮಾಡಬೇಕು. ॥ 63 ॥

ಭಗವಂತನ ಕಥೆಗಳನ್ನೇ ಹೇಳಬೇಕು ಅಥವಾ ಪ್ರೀತಿಯಿಂದ ಕೇಳಬೇಕು. ಉತ್ಸವಗಳಲ್ಲಿ ಪಕ್ಕವಾದ್ಯ ಸಹಿತ ನಾಮಸಂಕೀರ್ತನ ಮಾಡಬೇಕು. ॥ 64 ॥

ನನಗೆ ಸೇರಿದ ಎಲ್ಲರೂ ಪ್ರತಿದಿನವೂ ಹೀಗೆಯೇ ನಡೆದುಕೊಳ್ಳಬೇಕು. ಸಂಸ್ಕೃತ ಅಥವಾ ದೇಶಭಾಷೆಯ ಗ್ರಂಥಗಳನ್ನು ಯಥಾಶಕ್ತಿ ಅಭ್ಯಸಿಸಬೇಕು. ॥ 65 ॥

ಅವರವರ ಗುಣ-ಸ್ವಭಾವಾದಿಗಳಿಗೆ ತಕ್ಕುದಂತಹ ಕರ್ಮಗಳಲ್ಲಿಯೇ ಸರಿಯಾಗಿ ಆಲೋಚಿಸಿ ಅವರವರನ್ನು ನಿಯಮಿಸಬೇಕು. ಇದಕ್ಕೆ ವಿರುದ್ಧ ಯಾವುದನ್ನೂ ಮಾಡಬಾರದು. ॥ 66 ॥

ಅವರವರ ಯೋಗ್ಯತೆ ಮತ್ತು ಐಶ್ವರ್ಯಕ್ಕೆ ತಕ್ಕಂತೆ, ಅವರ ಎಲ್ಲಾ ಪರಿಚಾರಕರನ್ನೂ ಅನ್ನ ವಸ್ತ್ರಾದಿಗಳಿಂದ ಸದಾ ಗೌರವಿಸಬೇಕು. ॥ 67 ॥

ಮನುಷ್ಯರ ಗುಣ-ಸ್ವಭಾವಾದಿಗಳಿಗೂ, ದೇಶ-ಕಾಲಾದಿಗಳಿಗೂ ತಕ್ಕಂತೆಯೇ ಮನುಷ್ಯರನ್ನು ಮಾತನಾಡಿಸಬೇಕು. ಬೇರೆ ರೀತಿಯಲ್ಲಿ ಮಾತನಾಡಿಸಬಾರದು. ॥ 68 ॥

ಗುರು, ರಾಜನು, ವೃದ್ಧನು, ತ್ಯಾಗಿಯು, ವಿದ್ವಾಂಸನು, ತಪಸ್ವಿಯು –ಇವರುಗಳಿಗೆ ವಿನಯದಿಂದ ಎದ್ದು ನಿಂತು ಗೌರವಾದಿಗಳನ್ನು ತೋರಿಸಬೇಕು. ॥ 69 ॥

ಗುರು, ದೇವರು, ರಾಜರು ಇವರ ಎದುರಿನಲ್ಲಿ ತೊಡೆಯ ಮೇಲೆ ತೊಡೆ ಹಾಕಿ ಕೂರಬಾರದು. ಸಭೆಯಲ್ಲಿ ಮಂಡಿಯನ್ನು ಬಟ್ಟೆಯಿಂದ ಕಟ್ಟಿಕೊಂಡು ಕೂರಬಾರದು. ॥ 70 ॥

ತನ್ನ ಆಚಾರ್ಯರೊಂದಿಗೆ ಎಂದೂ ವಾದ ಮಾಡಬಾರದು. ತನ್ನ ಶಕ್ತಿಗೆ ತಕ್ಕಂತೆ ಆಹಾರ, ಹಣ, ವಸ್ತು ಮುಂತಾದವುಗಳಿಂದ ಆಚಾರ್ಯನನ್ನು ಎಲ್ಲರೂ ಪೂಜಿಸಬೇಕು. ॥ 71 ॥

ನನ್ನ ಶಿಷ್ಯರುಗಳು ಆಚಾರ್ಯನು ಬರುತ್ತಿರುವುದನ್ನು ಕಂಡರೆ, ತತ್‌ಕ್ಷಣ ಪ್ರೀತಿ–ಗೌರವಗಳಿಂದ ಎದ್ದು ಎದುರುಗೊಂಡು ಹೋಗಬೇಕು. ಮತ್ತೆ ಅವನು ಹೊರಟಾಗ ಗ್ರಾಮದ ಎಲ್ಲೆಯವರೆಗೆ ಅವನನ್ನು ಹಿಂಬಾಲಿಸಿ ಹೋಗಬೇಕು. ॥ 72 ॥

ಧರ್ಮವೇ ಸಕಲವಿಧ ಪುರುಷಾರ್ಥಗಳನ್ನು ಕೊಡಬಲ್ಲದ್ದು. ಆದ್ದರಿಂದ ಒಂದು ಕೆಲಸ ಎಷ್ಟೇ ಲಾಭದಾಯಕವಾದರೂ, ಧರ್ಮರಹಿತವಾಗಿದ್ದರೆ ಅದನ್ನು ಎಂದೂ ಆಚರಿಸಬಾರದು. ॥ 73 ॥

ಹಿಂದಿನ ಕಾಲದ ಮಹಾತ್ಮರಾದ ಯಾರಾದರೊಬ್ಬರು ಯಾವಾಗಲಾದರೂ ಅಧರ್ಮವನ್ನು ಆಚರಿಸಿದ್ದು ಕಂಡುಬಂದರೂ, ಅದನ್ನು ನಾವು ಆದರ್ಶವಾಗಿ ತೆಗೆದುಕೊಳ್ಳಬಾರದು. ಅವರು ಮಾಡಿದ ಧರ್ಮಾಚರಣೆಯನ್ನು ಮಾತ್ರ ನಾವು ಆದರ್ಶವಾಗಿ ತೆಗೆದುಕೊಳ್ಳಬೇಕು. ॥ 74 ॥

ಯಾರೊಬ್ಬರ ರಹಸ್ಯ ಸಮಾಚಾರಗಳನ್ನೂ ನಾವು ಬಹಿರಂಗ ಪಡಿಸಬಾರದು. ದುಷ್ಟರು – ಶಿಷ್ಟರೆಲ್ಲರನ್ನೂ ಒಂದೇ ರೀತಿಯಲ್ಲಿ ಕಾಣಬಾರದು. ಹಾಗೆ ಮಾಡಿದರೆ ಪೂಜ್ಯ–ಪೂಜಾವ್ಯತಿಕ್ರಮವೆಂಬ ದೋಷವು ಬರುತ್ತದೆ. ॥ 75 ॥

'ಚಾತುರ್ಮಾಸ್ಯ' (ಆಷಾಢಾದಿ 4 ತಿಂಗಳು ಅಥವಾ 4 ಪಕ್ಷಗಳು) ಕಾಲದಲ್ಲಿ ಎಲ್ಲರೂ ವಿಶೇಷ ನಿಯಮಗಳೊಂದಿಗೆ ವ್ರತವನ್ನು ಆಚರಿಸತಕ್ಕದ್ದು. ಇದು ಸಾಧ್ಯವಾಗದಿದ್ದರೆ, 'ಶ್ರಾವಣಮಾಸ' ಒಂದರಲ್ಲಾದರೂ ಆ ರೀತಿ ಆಚರಿಸಬೇಕು. ॥ 76॥

ಭಗವತ್ಕಥಾಶ್ರವಣ, ಪ್ರವಚನ, ಗುಣ ಕೀರ್ತನ, ವಿಶೇಷಪೂಜೆ, ಮಂತ್ರ ಜಪ, ಸ್ತೋತ್ರಪಾಠ, ಪ್ರದಕ್ಷಿಣೆ ಹಾಗೂ ॥ 77 ॥

ಸಾಷ್ಟಾಂಗಪ್ರಣಾಮ – ಇವು ಉತ್ತಮವಾದ ನಿಯಮಗಳು. ಇವುಗಳಲ್ಲಿ ಕನಿಷ್ಠಪಕ್ಷ ಯಾವುದಾದರೊಂದನ್ನಾದರೂ ವಿಶೇಷವಾದ ಭಕ್ತಿಯಿಂದ ಆಚರಿಸಬೇಕು. ॥ 78 ॥

ಎಲ್ಲಾ ಏಕಾದಶೀ ವ್ರತಗಳನ್ನೂ ಶ್ರದ್ಧೆಯಿಂದ ಆಚರಿಸಬೇಕು. ಜನ್ಮಾಷ್ಟಮೀ ಮೊದಲಾದ ಭಗವಂತನ ಅವತಾರ ದಿನಗಳನ್ನೂ, ಶಿವರಾತ್ರಿಯನ್ನೂ ವಿಶೇಷೋತ್ಸವದೊಂದಿಗೆ ಆಚರಿಸಬೇಕು. ॥ 79 ॥

ಉಪವಾಸ ದಿನಗಳಲ್ಲಿ ಹಗಲು ನಿದ್ದೆಯನ್ನು ಸರ್ವಥಾ ಬಿಡತಕ್ಕದ್ದು. ಹಾಗೆ ನಿದ್ದೆ ಮಾಡುವುದರಿಂದಲೂ, ಸ್ತ್ರೀಸಂಗಮದಿಂದಲೂ, ಮಾನವರ ಉಪವಾಸ ಫಲ ನಾಶವಾಗುವುದು. ॥ 80 ॥

ಸರ್ವವೈಷ್ಣವರಲ್ಲೂ ಶ್ರೇಷ್ಠರಾದ ಶ್ರೀವಲ್ಲಭಾಚಾರ್ಯರ ಸುಪುತ್ರರಾದ ಶ್ರೀವಿಠಲನಾಥರು ಯಾವ ವ್ರತಗಳ ಮತ್ತು ಉತ್ಸವಗಳ ನಿರ್ಣಯವನ್ನು ಮಾಡಿದ್ದಾರೆಯೋ,

॥ 81 ॥

ಆ ನಿರ್ಣಯವನ್ನು ಅನುಸರಿಸಿಯೇ ವ್ರತ ಮತ್ತು ಉತ್ಸವಗಳನ್ನು ಆಚರಿಸಬೇಕು. ಅವರು ಹೇಳಿರುವ ರೀತಿಯಲ್ಲೇ ಶ್ರೀಕೃಷ್ಣನ (ಭಗವಂತನ) ಸೇವಾದಿಗಳನ್ನು ಆಚರಿಸಬೇಕು. ॥ 82 ॥

ದ್ವಾರಕಾ ಮೊದಲಾದ ತೀರ್ಥಕ್ಷೇತ್ರಯಾತ್ರೆಯನ್ನು ಶಾಸ್ತ್ರ ಹೇಳಿರುವ ರೀತಿಯಲ್ಲಿ ಆಚರಿಸಬೇಕು. ಎಲ್ಲರೂ ಶಕ್ತ್ಯನುಸಾರ ದೀನ-ದಲಿತರಲ್ಲಿ ಪ್ರೀತಿಯಿಂದ ವರ್ತಿಸಬೇಕು. ॥ 83 ॥

ವಿಷ್ಣು, ಶಿವ, ಗಣಪತಿ, ಪಾರ್ವತೀ ಮತ್ತು ಸೂರ್ಯನು – ಈ ಐದು ದೇವತೆಗಳು ಪರಮಪೂಜ್ಯರೆಂದು ನನಗೆ ಸೇರಿದವರು ತಿಳಿಯಬೇಕು. ॥ 84 ॥

ಭೂತಪ್ರೇತಾದಿ ದುಷ್ಟಶಕ್ತಿಗಳು ಪೀಡಿಸಿದಾಗ ನಾರಾಯಣಕವಚ, ಹನುಮನ್ಮಂತ್ರ ಇವುಗಳನ್ನು ಜಪಿಸಬೇಕೇ ಹೊರತು ಕ್ಷುದ್ರದೇವತೆಗಳ ಮಂತ್ರವನ್ನು ಜಪಿಸಬಾರದು. ॥ 85 ॥

ಸೂರ್ಯ-ಚಂದ್ರಗ್ರಹಣಗಳು ಸಂಭವಿಸಿದಾಗ ಉಳಿದ ಎಲ್ಲ ಕೆಲಸಗಳನ್ನು ಬಿಟ್ಟು ತಡ ಮಾಡದೇ ಸ್ನಾನಾದಿಗಳನ್ನು ಮಾಡಿ ಶ್ರೀಕೃಷ್ಣಮಂತ್ರವನ್ನು ಎಲ್ಲರೂ ಜಪಿಸಬೇಕು. ॥ 86 ॥

ಗ್ರಹಣ ಬಿಟ್ಟ ಮೇಲೆ ವಸ್ತ್ರ ಸಹಿತ ಸ್ನಾನ ಮಾಡಿ ಗೃಹಸ್ಥರು ಯಥಾಶಕ್ತಿ ದಾನಾದಿಗಳನ್ನು ಮಾಡಬೇಕು. ತ್ಯಾಗಿಭಕ್ತರು ದೇವರನ್ನು ಪೂಜಿಸಬೇಕು. ॥ 87 ॥

ನನಗೆ ಸೇರಿದ ನಾಲ್ಕು ವರ್ಣದ ಜನರು ಜಾತಾಶೌಚ-ಮೃತಾಶೌಚಗಳನ್ನು ತನ್ನ ಸಂಬಂಧಕ್ಕೆ ತಕ್ಕಂತೆ ಶಾಸ್ತ್ರೋಕ್ತರೀತಿಯಲ್ಲಿ ಪಾಲಿಸಬೇಕು. ॥ 88 ॥

ಬ್ರಾಹ್ಮಣರು ಇಂದ್ರಿಯಜಯ, ಮನೋಜಯ, ಸಹನೆ, ಸಂತುಷ್ಟಿ ಮೊದಲಾದ ಗುಣಗಳುಳ್ಳವರಾಗಿರಬೇಕು. ಕ್ಷತ್ರಿಯರು ಶೌರ್ಯ-ಧೈರ್ಯಾದಿ ಗುಣಗಳಿಂದಿರಬೇಕು. ॥ 89 ॥

ವೈಶ್ಯರು ಬೇಸಾಯ, ವ್ಯಾಪಾರ, ಲೇವಾದೇವಿ ಮುಂತಾದ ವ್ಯಕ್ತಿಯುಳ್ಳವರಾಗಿರಬೇಕು. ಶೂದ್ರರು ಮೇಲೆ ಹೇಳಿದವರ ಸೇವಕರಾಗಿರಬೇಕು. ॥ 90 ॥

ತ್ರೈವರ್ಣಿಕರು (ಬ್ರಾಹ್ಮಣ, ಕ್ಷತ್ರಿಯ, ವೈಶ್ಯ) ಆಯಾ ಕಾಲಗಳಲ್ಲಿ ಗರ್ಭಾಧಾನಾದಿ ಸಂಸ್ಕಾರಗಳನ್ನೂ, ನಿತ್ಯಕರ್ಮಗಳನ್ನೂ , ಶ್ರಾದ್ಧವನ್ನೂ ಶಕ್ತ್ಯನುಸಾರವಾಗಿ ಅವರವರ ಗೃಹ್ಯಸೂತ್ರಗಳಿಗನುಸಾರ ಮಾಡಬೇಕು. ॥ 91 ॥

ತಿಳಿದೋ ಅಥವಾ ತಿಳಿಯದೆಯೋ ಎಂದಾದರೂ ಮಾಡಿದ ಚಿಕ್ಕದಾದ ಮತ್ತು ದೊಡ್ಡದಾದ ಪಾಪಗಳಿಗೆ ಪ್ರಾಯಶ್ಚಿತ್ತವನ್ನೂ ಶಕ್ತ್ಯನುಸಾರ ಮಾಡಬೇಕು. ॥ 92 ॥

ನಾಲ್ಕು ವೇದಗಳು, ವ್ಯಾಸಸೂತ್ರಗಳು, ಶ್ರೀಮದ್ಭಾಗವತವೆಂಬ ಪುರಾಣ, ಮಹಾಭಾರತದಲ್ಲಿ ಬರುವ ವಿಷ್ಣುಸಹಸ್ರನಾಮ, ॥ 93 ॥

ಭಗವದ್ಗೀತೆ, ವಿದುರನೀತಿ, ವಾಸುದೇವಮಾಹಾತ್ಮ್ಯ, ಸ್ಕಂದಪುರಾಣದಲ್ಲಿ ಬರುವ ವೈಷ್ಣವಖಂಡ, ॥ 94 ॥

ಧರ್ಮಶಾಸ್ತ್ರಗಳಲ್ಲಿ ಯಾಜ್ಞವಲ್ಕ್ಯಸ್ಮೃತಿ ಈ ಎಂಟೂ ನನಗಿಷ್ಟವಾದ ಸಚ್ಛಾಸ್ತ್ರಗಳಾಗಿರುತ್ತವೆ. ॥ 95 ॥

ತನ್ನ ಹಿತವನ್ನು ಬಯಸುವ ನನ್ನ ಶಿಷ್ಯರಾದ ಎಲ್ಲ ತ್ರೈವರ್ಣಿಕರು ಇವುಗಳನ್ನೇ ಕೇಳಬೇಕು, ಓದಬೇಕು ಮತ್ತು ಹೇಳಬೇಕು. ॥ 96 ॥

ಆ ಎಂಟು ಶಾಸ್ತ್ರಗಳಲ್ಲೂ, ಆಚಾರ-ವ್ಯವಹಾರ-ಪ್ರಾಯಶ್ಚಿತ್ತಗಳನ್ನು ನಿರ್ಣಯಿಸುವುದರಲ್ಲಿ 'ಮಿತಾಕ್ಷರಾ' ಎಂಬ ವ್ಯಾಖ್ಯಾನದಿಂದ ಕೂಡಿದ ಯಾಜ್ಞವಲ್ಕ್ಯಸ್ಮೃತಿಯೇ ಗ್ರಹಿಸತಕ್ಕದ್ದು. ॥ 97 ॥

ಇವುಗಳಲ್ಲೂ ಶ್ರೀಮದ್ಭಾಗವತದ ಐದು ಮತ್ತು ಹತ್ತನೆಯ ಸ್ಕಂದಗಳು ಶ್ರೀಕೃಷ್ಣ ಮಾಹಾತ್ಮ್ಯವನ್ನು ಅರಿಯುವುದಕ್ಕೆ ಸರ್ವಶ್ರೇಷ್ಠವೆಂದು ತಿಳಿಯಬೇಕು. ॥ 98 ॥

ಶ್ರೀಭಾಗವತದ ಹತ್ತನೆಯ ಸ್ಕಂದ ಮತ್ತು ಐದನೆಯ ಸ್ಕಂದ, ಯಾಜ್ಞವಲ್ಕ್ಯಸ್ಮೃತಿ ಈ ಮೂರೂ ಕ್ರಮವಾಗಿ ನಾನು ಒಪ್ಪುವ ಭಕ್ತಿಶಾಸ್ತ್ರ, ಯೋಗಶಾಸ್ತ್ರ, ಧರ್ಮಶಾಸ್ತ್ರ ಆಗುತ್ತವೆ. ॥ 99 ॥

ವ್ಯಾಸಸೂತ್ರ ಮತ್ತು ಭಗವದ್ಗೀತೆಗೆ ಶ್ರೀಮದ್ರಾಮಾನುಜರು ಬರೆದಿರುವ ಭಾಷ್ಯವೇ ನನಗೆ ಸಮ್ಮತವಾದ ಅಧ್ಯಾತ್ಮಶಾಸ್ತ್ರವೆಂದು ತಿಳಿಯಿರಿ. ॥ 100 ॥

ಈ ಎಲ್ಲಾ ಶಾಸ್ತ್ರಗಳಲ್ಲಿಯೂ ಶ್ರೀಕೃಷ್ಣ, ಧರ್ಮ, ಭಕ್ತಿ ಮತ್ತು ವೈರಾಗ್ಯ – ಇವುಗಳನ್ನು ಅತ್ಯುತ್ತಮ ರೀತಿಯಲ್ಲಿ ಪ್ರತಿಪಾದಿಸುತ್ತವೆಯೋ ॥ 101 ॥

ಅಂತಹ ವಾಕ್ಯಗಳೇ ಉಳಿದ ವಾಕ್ಯಗಳಿಗಿಂತಲೂ ಪ್ರಧಾನವೆಂದು ತಿಳಿಯಬೇಕು. ಧರ್ಮದಿಂದ ಕೂಡಿದ ಕೃಷ್ಣಭಕ್ತಿಯೇ ಮಾಡತಕ್ಕದ್ದೆಂಬುದೇ ಇದರ ರಹಸ್ಯವಾಗಿದೆ. ॥ 102 ॥

ಶ್ರುತಿ–ಸ್ಮೃತಿಗಳಲ್ಲಿ ಪ್ರತಿಪಾದಿತವಾಗಿರುವ ಸದಾಚಾರವೇ ಧರ್ಮವೆನಿಸಿದೆ. ಪರಮಾತ್ಮನಲ್ಲಿ ಮಾಹಾತ್ಮ್ಯಜ್ಞಾನಪೂರ್ವಕವಾದ, ಅತ್ಯಂತ ಪ್ರೀತಿಯೇ ಭಕ್ತಿಯೆನಿಸಿದೆ. ॥ 103 ॥

ಪರಮಾತ್ಮವ್ಯತಿರಿಕ್ತ ವಸ್ತುಗಳಲ್ಲಿ ಪ್ರೀತಿಯಿಲ್ಲದಿರುವಿಕೆಯೇ ವೈರಾಗ್ಯವಾಗುತ್ತದೆ. ಜೀವಾತ್ಮ, ಪರಮಾತ್ಮ, ಮಾಯೆ ಇವುಗಳ ವಿಷಯಕವಾದ ತತ್ತ್ವಜ್ಞಾನವೇ ಜ್ಞಾನವಾಗುತ್ತದೆ. ॥ 104 ॥

ಅವರವರ ಹೃದಯದಲ್ಲಿ ಅಣುವಾಗಿಯೂ, ಸೂಕ್ಷ್ಮವಾಗಿಯೂ ಇರುವವನು ಜೀವಾತ್ಮನು. ಇವನು ಜ್ಞಾನಸ್ವರೂಪನು. ತನ್ನ ಜ್ಞಾನಶಕ್ತಿಯಿಂದ ಶರೀರವೆಲ್ಲವನ್ನೂ ವ್ಯಾಪಿಸಿರುವನು ಮತ್ತು ನಾಶಾದಿರಹಿತನು. ॥ 105 ॥

ಸತ್ವ, ರಜಸ್ಸು, ತಮಸ್ಸೆಂಬ ಮೂರುಗಳೊಂದಿಗೆ ಕೂಡಿರುವುದು ಮಾಯೆ. ಇದು ಜ್ಞಾನಕ್ಕೆ ವಿರೋಧಿಯಾಗಿರುವುದು. ಭಗವಂತನ ಶಕ್ತಿರೂಪ, ದೇಹ ಮತ್ತು ಬಂಧಗಳಿಂದ ಪತ್ನೀ–ಪುತ್ರಾದಿದೇಹಗಳಲ್ಲಿ ನಾನು, ನನ್ನದು ಎಂಬ ಮೋಹಕ್ಕೆ ಕಾರಣವಾಗುವುದು. ॥ 106 ॥

ಹೃದಯದೊಳಗೆ ಜೀವಾತ್ಮನಿರುವಂತೆಯೇ, ಈ ಜೀವಾತ್ಮನೊಳಗೆ ಪರಮಾತ್ಮನು ಅಂತರ್ಯಾಮಿಯಾಗಿರುವನು. ಅವನು ಸ್ವತಂತ್ರನು. ಎಲ್ಲಕ್ಕೂ ಪ್ರಭು. ಸರ್ವಕರ್ಮಗಳಿಗೂ ಫಲವನ್ನು ಕೊಡುವವನು. ॥ 107 ॥

ಅವನೇ ಶ್ರೀಕೃಷ್ಣನು. ಪರಬ್ರಹ್ಮನು, ಭಗವಂತನು, ಪುರುಷೋತ್ತಮನು. ನಾವು ಉಪಾಸನೆ ಮಾಡತಕ್ಕ ನಮ್ಮ ಇಷ್ಟದೇವತೆ. ಸರ್ವವಸ್ತುಗಳ ಉತ್ಪತ್ತ್ಯಾದಿಗಳಿಗೆ ಕಾರಣನು. ॥ 108 ॥

ಪ್ರಭುವಾದ ಆ ಕೃಷ್ಣನೇ ರಾಧಾದೇವಿಯಿಂದ ಕೂಡಿದಾಗ ರಾಧಾಕೃಷ್ಣನು. ಲಕ್ಷ್ಮೀರೂಪಿಣಿಯಾದ ರುಕ್ಮಿಣಿಯೊಂದಿಗೆ ಕೂಡಿದಾಗ ಲಕ್ಷ್ಮೀನಾರಾಯಣನಾಗುವನು. ॥ 109 ॥

ಅರ್ಜುನನೊಂದಿಗೆ ಕೂಡಿದಾಗ ನರನಾರಾಯಣನೆನಿಸಿಕೊಳ್ಳುವನು. ಬಲರಾಮಾದಿಗಳೊಂದಿಗೆ ಕೂಡಿದಾಗ ರಾಮ, ಕೃಷ್ಣ ಇತ್ಯಾದಿ ಆಯಾ ಹೆಸರುಗಳಿಂದ ಹೇಳಲ್ಪಡುತ್ತಾನೆ. ॥ 110 ॥

ರಾಧೆ ಮುಂತಾದವರು ಭಕ್ತರಾಗಿ ಕೆಲಸಮಯದಲ್ಲಿ ಅವನ ಪಕ್ಕದಲ್ಲಿರುತ್ತಾರೆ. ಕೆಲಸಮಯದಲ್ಲಿ ಅತ್ಯಂತ ಪ್ರೇಮದಿಂದ ಕೂಡಿ, ಬೇರೆಯಾಗಿಲ್ಲದೇ ಅವನ ಮೂರ್ತಿಯಲ್ಲೇ ಏಕೀಭೂತರಾಗಿತ್ತಾರೆ. ॥ 111 ॥

ಆದ್ದರಿಂದ ಈ ರಾಧಾದಿಗಳಿಗೂ ಶ್ರೀಕೃಷ್ಣನಿಗೂ ಯಾವ ರೀತಿಯಲ್ಲೂ ಭೇದವನ್ನು ತಿಳಿಯಲು ಸಾಧ್ಯವೇ ಇಲ್ಲ. ಎರಡು ತೋಳುಗಳು, ನಾಲ್ಕು ತೋಳುಗಳು ಮುಂತಾದ ರೂಪಭೇದಗಳು ಅವನಿಗೆ ಐಚ್ಛಿಕವಾಗಿ ಬರುವುದು. ॥ 112 ॥

ಈ ಲೋಕದಲ್ಲಿ ಹುಟ್ಟಿದ ಮನುಜರೆಲ್ಲರೂ ಶ್ರೀಕೃಷ್ಣಪರಮಾತ್ಮನ ಭಕ್ತಿಯನ್ನೇ ಎಲ್ಲ ರೀತಿಯಲ್ಲಿಯೂ ಮಾಡಬೇಕು. ಇದಕ್ಕಿಂತಲೂ ಬೇರೆ ಯಾವುದೂ ಮಾನವರಿಗೆ ಹಿತಕರವಾದದ್ದು ಇಲ್ಲವೆಂದು ನಿಶ್ಚಯಿಸಿಕೊಳ್ಳಿ. ॥ 113 ॥

ಶ್ರೀಕೃಷ್ಣನಲ್ಲಿ ಭಕ್ತಿ ಮತ್ತು ಸತ್ಸಂಗ ಇವುಗಳೇ ಸದ್ಗುಣಸಂಪನ್ನರ ಸದ್ಗುಣಗಳಿಗೆ ಉತ್ತಮ ಫಲವೆಂದು ತಿಳಿಯಬೇಕು. ಇಲ್ಲದಿದ್ದಲ್ಲಿ ಜ್ಞಾನಿಗಳೂ ಅಧೋಗತಿಯನ್ನು ಪಡೆಯುತ್ತಾರೆ. ॥ 114 ॥

ಶ್ರೀಕೃಷ್ಣನು, ಅವನ ಅವತಾರಗಳು, ಅವನ ಪ್ರತಿಮಾದಿರೂಪ ಮೂರ್ತಿಗಳು ಇವುಗಳನ್ನೇ ಧ್ಯಾನಿಸಬೇಕು. ಸಾಮಾನ್ಯ ಮಾನವರು ಅಥವಾ ದೇವತೆಗಳು, ಭಗವದ್ಭಕ್ತರು, ಬ್ರಹ್ಮಜ್ಞಾನಿಗಳು ಇವರು ಜೀವವರ್ಗಕ್ಕೆ ಸೇರಿದ್ದಲ್ಲಿ ಇವರನ್ನು ಧ್ಯಾನಿಸಬಾರದು. ॥ 115 ॥

ಸ್ಥೂಲ, ಸೂಕ್ಷ್ಮ ಮತ್ತು ಕಾರಣವೆಂಬ ಮೂರು ವಿಧ ದೇಹಗಳಿಗಿಂತಲೂ ಬೇರೆಯಾದ ತನ್ನ ಆತ್ಮವನ್ನು ಬ್ರಹ್ಮದ ಸ್ವರೂಪವೆಂದು ತಿಳಿದು, ಆ ಬ್ರಹ್ಮವೇ ಶ್ರೀಕೃಷ್ಣನಾದ್ದರಿಂದ, ಅವನಲ್ಲಿ ಸದಾ ಭಕ್ತಿಯನ್ನು ಮಾಡಬೇಕು. ॥ 116 ॥

ಶ್ರೀಮದ್ಭಾಗವತದ ಹತ್ತನೆಯ ಸ್ಕಂದವನ್ನು ಶ್ರದ್ಧಾ-ಭಕ್ತಿಯಿಂದ ಪ್ರತಿದಿನವೂ ಕೇಳಬೇಕು. ಕೊನೆಯ ಪಕ್ಷ ವರ್ಷಕ್ಕೆ ಒಂದು ಸಲವಾದರೂ ಪಂಡಿತರ ಮೂಲಕ ಭಾಗವತದ ಪ್ರವಚನವನ್ನು ಏರ್ಪಡಿಸಿ ಕೇಳಬೇಕು. ॥ 117 ॥

ಪುಣ್ಯಕ್ಷೇತ್ರಗಳಲ್ಲಿ, ಅಭೀಷ್ಟ ಫಲವನ್ನು ಕೊಡುವ ಶ್ರೀವಿಷ್ಣುಸಹಸ್ರನಾಮ ಮುಂತಾದವುಗಳ ಪುರಶ್ಚರಣವನ್ನು ಶಕ್ತಿಗೆ ತಕ್ಕಂತೆ ಮಾಡಬೇಕು. ॥ 118 ॥

ದೈವವಶದಿಂದ ಒದಗುವ ಕ್ಷಾಮ ಮೊದಲಾದ ಆಪತ್ತು ಮತ್ತು ಕಷ್ಟದಲ್ಲಾಗಲೀ, ಮನುಷ್ಯ ಸಹಜವಾದ ವ್ಯಾಧಿಗಳು ಒದಗಿದ್ದಾಗಲೀ, ತನಗೂ ಮತ್ತು ಇತರರಿಗೂ ರಕ್ಷಣೆಯಾಗುವಂತಹ ರೀತಿಯಲ್ಲೇ ನಡೆದುಕೊಳ್ಳಬೇಕು. ಬೇರೆ ರೀತಿಯಲ್ಲಲ್ಲ. ॥ 119 ॥

ಆಚಾರ, ವ್ಯವಹಾರ ಮತ್ತು ಪ್ರಾಯಶ್ಚಿತ್ತ ಇವುಗಳನ್ನು ದೇಶ, ಕಾಲ, ವಯಸ್ಸು, ಐಶ್ವರ್ಯ, ಜಾತಿ, ಶಕ್ತಿ ಇವುಗಳಿಗೆ ತಕ್ಕಂತೆ ಮಾಡಬೇಕು. ॥ 120 ॥

ವಿಶಿಷ್ಟಾದ್ವೈತ ತತ್ತ್ವವೇ ನನಗೆ ಸಮ್ಮತ. 'ಗೋ ಲೋಕ' ದಿವ್ಯಸ್ಥಾನವೇ ನನಗೆ ಇಷ್ಟವಾದುದು. ಹೀಗೆ ಬ್ರಹ್ಮಸ್ವರೂಪನಾದ ಶ್ರೀಕೃಷ್ಣನ ಸೇವೆಯೇ ಮುಕ್ತಿ ಎಂಬುದೇ ನನಗೆ ಸಮ್ಮತವೆಂದು ತಿಳಿಯಿರಿ. ॥ 121 ॥

ಇವುಗಳೆಲ್ಲವೂ ನನಗೆ ಸೇರಿದ ಪುರುಷರು ಮತ್ತು ಸ್ತ್ರೀಯರಿಗೆ ಸಾಧಾರಣವಾದ ಧರ್ಮಗಳಾಗುತ್ತವೆ. ವಿಶೇಷ ಧರ್ಮಗಳನ್ನು ಮುಂದೆ ಹೇಳುತ್ತೇನೆ. ॥ 122 ॥

ನನ್ನ ಜ್ಯೇಷ್ಠ ಸಹೋದರರ ಪುತ್ರನಾದ ಅಯೋಧ್ಯಾಪ್ರಸಾದನಾಗಲೀ, ಕನಿಷ್ಠ ಸಹೋದರರ ಪುತ್ರನಾದ ರಘುವೀರನಾಗಲೀ, ತನ್ನ ಅತ್ಯಂತ ಸನ್ನಿಹಿತ ಸಂಬಂಧವಿಲ್ಲದ ಸ್ತ್ರೀಯರಿಗೆ ಸಾಕ್ಷಾತ್ತಾಗಿ ಧರ್ಮೋಪದೇಶವನ್ನು ಎಂದೂ ಮಾಡಬಾರದು. ॥ 123॥

ಅಂತಹ ಸ್ತ್ರೀಯರನ್ನು ಎಂದೂ ಸ್ಪರ್ಶಿಸಬಾರದು. ಮಾತಾಡಿಸಬಾರದು. ಯಾರಲ್ಲಿಯೂ ಕ್ರೂರವಾಗಿ ವರ್ತಿಸಬಾರದು. ಯಾರೊಬ್ಬರ ಪದಾರ್ಥವನ್ನೂ ರಕ್ಷಣಾರ್ಥವಾಗಿ ತನ್ನಲ್ಲಿ ಇಟ್ಟುಕೊಳ್ಳಬಾರದು. ॥ 124 ॥

ವ್ಯವಹಾರಗಳಲ್ಲಿ ಯಾರೊಬ್ಬರಿಗೂ ಜಾಮೀನಾಗಿ ನಿಲ್ಲಬಾರದು. ಆಪತ್ಕಾಲದಲ್ಲೂ ಭಿಕ್ಷೆ ಬೇಡಿ ಜೀವಿಸಬೇಕೇ ಹೊರತು ಎಲ್ಲೂ ಸಾಲ ಮಾಡಬಾರದು. ॥ 125॥

ತನ್ನ ಶಿಷ್ಯರು ಅರ್ಪಿಸಿದ ಧಾನ್ಯಾದಿಗಳನ್ನು ಮಾರಬಾರದು. ಧಾನ್ಯಾದಿಗಳು ಹಳೆಯದಾದರೆ ಅದನ್ನು ಕೊಟ್ಟು ಹೊಸದನ್ನು ಸ್ವೀಕರಿಸಬಹುದು. ಇದು ಮಾರಾಟವಾಗುವುದಿಲ್ಲ. ॥ 126 ॥

ಭಾದ್ರಪದ ಶುಕ್ಲ ಚತುರ್ಥಿಯಲ್ಲಿ ಗಣಪತಿಯ ಪೂಜೆಯನ್ನು ಮಾಡಬೇಕು. ಆಶ್ವಯುಜ ಕೃಷ್ಣ ಚತುರ್ದಶಿಯಲ್ಲಿಹನುಮತ್ಪೂಜೆಯನ್ನು ಮಾಡಬೇಕು. ॥ 127 ॥

ನನಗೆ ಸೇರಿದವರೆಲ್ಲರ ಧರ್ಮ ರಕ್ಷಣೆಯ ಉದ್ದೇಶದಿಂದ ಗುರುವಿನ ಸ್ಥಾನದಲ್ಲಿ ನನ್ನಿಂದ ಸ್ಥಾಪಿತರಾದ ಅಯೋಧ್ಯಾಪ್ರಸಾದ ಮತ್ತು ರಘುವೀರ ಇವರಿಬ್ಬರಿಂದ ಮುಮುಕ್ಷುಗಳೆಲ್ಲರೂ ದೀಕ್ಷೆಯನ್ನು ಪಡೆಯಬೇಕು. ॥ 128 ॥

ನನಗೆ ಸೇರಿದ ಎಲ್ಲಾ ಸಂತರನ್ನೂ ಅವರವರ ಯೋಗ್ಯತಾನುಸಾರ ಅವರವರ ಧರ್ಮದಲ್ಲಿ ಸ್ಥಾಪಿಸಿ ಗೌರವಿಸಬೇಕು. ಅವರ ಮೂಲಕ ಸಚ್ಛಾಸ್ತ್ರಗಳ ಅಭ್ಯಾಸವನ್ನು ಪ್ರೀತಿಯಿಂದ ಮಾಡಿಸಬೇಕು. ॥ 129 ॥

ನಾನು ಪ್ರತಿಷ್ಠೆ ಮಾಡಿದ ದೊಡ್ಡ ಮಂದಿರದಲ್ಲಿ ಲಕ್ಷ್ಮೀನಾರಾಯಣ ಮುಂತಾದ ದೇವರ ಸೇವೆಯನ್ನು ಯಥಾಶಾಸ್ತ್ರ ನಡೆಸಬೇಕು. ॥ 130 ॥

ಯಾವ ಮಾನವನಾದರೂ ಅನ್ನದ ಅಪೇಕ್ಷೆಯಿಂದ ಭಗವನ್ಮಂದಿರಕ್ಕೆ ಬಂದರೆ, ಅವನಿಗೆ ಯಥಾಶಕ್ತಿ ಅನ್ನವನ್ನು ಗೌರವಾದರಗಳಿಂದ ಕೊಡಬೇಕು. ॥ 131 ॥

ಒಂದು ಪಾಠಶಾಲೆಯನ್ನು ವ್ಯವಸ್ಥೆಗೊಳಿಸಿ, ಅದರಲ್ಲಿ ಒಬ್ಬ ವಿದ್ವಾಂಸನಾದ ಬ್ರಾಹ್ಮಣನ್ನು ಇರಿಸಿ, ಸದ್ವಿದ್ಯೆಯ ಶಿಕ್ಷಣವನ್ನು ನಡೆಸಬೇಕು. ಏಕೆಂದರೆ ಈ ಲೋಕದಲ್ಲಿ ವಿದ್ಯಾದಾನವೇ ದೊಡ್ಡದಾದ ಪುಣ್ಯವಾಗುತ್ತದೆ. ॥ 132 ॥

ಹೀಗೆಯೇ ಅಯೋಧ್ಯಾಪ್ರಸಾದ ಮತ್ತು ರಘುವೀರ ಇವರ ಪತ್ನಿಯರೇ ತಮ್ಮ ಪತಿಯ ಅನುಮತಿಯನ್ನು ಪಡೆದು, ಸ್ತ್ರೀಯರಿಗೆ ಶ್ರೀಕೃಷ್ಣಮಂತ್ರವನ್ನು ಉಪದೇಶಿಸಬೇಕು. ॥ 133 ॥

ಆ ಇಬ್ಬರು ಪತ್ನಿಯರು ತಮ್ಮ ಹತ್ತಿರದ ಸಂಬಂಧವಿಲ್ಲದ ಪುರುಷರನ್ನು ಯಾವ ಸಮಯದಲ್ಲೂ ಮುಟ್ಟಬಾರದು ಮಾತಾಡಿಸಬಾರದು, ಮುಖವನ್ನೂ ತೋರಿಸಬಾರದು. ॥ 134 ॥

ನನಗೆ ಸೇರಿದ ಗೃಹಸ್ಥಾಶ್ರಮದ ಪುರುಷರು ತಮ್ಮ ಹತ್ತಿರದ ಸಂಬಂಧವಿಲ್ಲದ ಸ್ತ್ರೀಯರನ್ನೂ, ವಿಧವೆಯರನ್ನೂ ಮುಟ್ಟಬಾರದು. ॥ 135 ॥

ತರುಣಿಯರಾದ ತಾಯಿ, ಸಹೋದರಿ ಮತ್ತು ಮಗಳು ಇವರೊಂದಿಗೆ ಆಪತ್ಕಾಲವಿಲ್ಲದ ಸಮಯ ಏಕಾಂತದಲ್ಲಿ ಇರಬಾರದು. ಎಂತಹ ಆಪತ್ತಿನಲ್ಲೂ ತನ್ನ ಪತ್ನಿಯನ್ನು ದಾನ ಮಾಡಬಾರದು. ॥ 136 ॥

ಯಾವುದೇ ರೀತಿಯಲ್ಲಾದರೂ ಒಬ್ಬ ಸ್ತ್ರೀಗೆ ರಾಜನೊಂದಿಗೆ ಸಂಬಂಧವಿದ್ದಲ್ಲಿ, ಆ ಸ್ತ್ರೀಯೊಂದಿಗೆ ಯಾವ ವಿಧವಾದ ಸಂಪರ್ಕವನ್ನೂ ಇಟ್ಟುಕೊಳ್ಳಬಾರದು. ॥ 137 ॥

ಗೃಹಸ್ಥರು, ತನ್ನ ಮನೆಗೆ ಬಂದ ಅತಿಥಿಯನ್ನು ಅನ್ನಾದಿಗಳಿಂದ ಯಥಾಶಕ್ತಿ ಪೂಜಿಸಬೇಕು. ಹಾಗೆಯೇ ಆ ಸಮಯದಲ್ಲಿ ದೇವತಾಕಾರ್ಯಗಳನ್ನಾಗಲೀ, ಪಿತೃಕಾರ್ಯಗಳನ್ನಾಗಲೀ ಯಥಾಶಕ್ತಿ ಮಾಡಬೇಕು. ॥ 138 ॥

ನನಗೆ ಸೇರಿದವರು ತಮ್ಮ ಮಾತಾ–ಪಿತೃಗಳ ಮತ್ತು ಗುರುವಿನ ಸೇವೆಯನ್ನು ಬದುಕಿರುವವರೆಗೂ ಮಾಡಬೇಕು. ರೋಗದಿಂದ ಪೀಡಿತರಾದವರಿಗೂ ಶಕ್ತ್ಯನುಸಾರ ಸಹಾಯ ಮಾಡಬೇಕು. ॥ 139 ॥

ಎಲ್ಲರೂ ಅವರವರ ವರ್ಣ ಮತ್ತು ಆಶ್ರಮಕ್ಕೆ ತಕ್ಕಂತೆಯೇ ಧನಾರ್ಜನವನ್ನು ಶಕ್ತ್ಯನುಸಾರ ಮಾಡಬೇಕು. ಬೇಸಾಯಗಾರರು ಎತ್ತಿಗೆ ಹಿಡ ಮಾಡಬಾರದು. ॥ 140 ॥

ನನಗೆ ಸೇರಿದ ಗೃಹಸ್ಥರು ಆಯಾ ಕಾಲದಲ್ಲಿ ಅನ್ನ ಮತ್ತು ಧನವನ್ನು ಯಥಾಶಕ್ತಿ ಸಂಗ್ರಹಿಸಿಡಬೇಕು. ದನಗಳನ್ನಿಟ್ಟಿರುವವರು ಹುಲ್ಲನ್ನು ದುಡ್ಡಿರುವಷ್ಟು ಸಂಗ್ರಹಿಸಿಡಬೇಕು. ॥ 141 ॥

ಗೋವು ಮೊದಲಾದ ಪ್ರಾಣಿಗಳನ್ನು ಶಕ್ತಿ ಇರುವವರು ಹುಲ್ಲು, ನೀರು ಮುಂತಾದವುಗಳಿಂದ ಯಥಾಶಕ್ತಿ ರಕ್ಷಿಸಬೇಕು. ॥ 142 ॥

ಪುತ್ರ ಮತ್ತು ಮಿತ್ರಾದಿಗಳೊಂದಿಗೂ, ಭೂಮಿ ಮತ್ತು ದುಡ್ಡು ಮುಂತಾದವುಗಳ ವ್ಯವಹಾರವನ್ನು ಸಾಕ್ಷಿಯೊಂದಿಗೆ ಸರಿಯಾದ ಬರವಣಿಗೆ ಇಲ್ಲದೇ ಎಂದೂ ಮಾಡಬಾರದು. ॥ 143 ॥

ತನ್ನ ಅಥವಾ ಇತರರ ವಿವಾಹಾದಿಗಳಲ್ಲಿ ಕೊಡಬೇಕಾದ ದುಡ್ಡಿನ ವ್ಯವಹಾರವನ್ನೂ ಸಾಕ್ಷಿಯೊಂದಿಗೆ ಕೂಡಿದ ಲೇಖನಾದಿಗಳಿಲ್ಲದೇ ಕೇವಲ ಮಾತಿನಿಂದ ನಡೆಸಬಾರದು. ॥ 144 ॥

ಎಂದೂ ತನ್ನ ಆದಾಯಕ್ಕೆ ತಕ್ಕಂತೆ ಖರ್ಚನ್ನು ಮಾಡಬೇಕು. ಇಲ್ಲದಿದ್ದರೆ, ಬಹಳ ದುಃಖ ಪಡಬೇಕಾಗುವುದೆಂದು ತಿಳಿಯಿರಿ. ॥ 145 ॥

ಪ್ರತಿದಿನ ನಡೆಯುವ ವ್ಯಹಾರದಲ್ಲಿ ದುಡ್ಡು ಮುಂತಾದವುಗಳ ಆದಾಯ ಮತ್ತು ಖರ್ಚನ್ನು ಸರಿಯಾಗಿ ಸ್ಮರಣೆಯಿಂದ ತಾನೇ ಸ್ಪಷ್ಟವಾದ ಅಕ್ಷರದಲ್ಲಿ ಬರೆದಿಡಬೇಕು. ॥ 146 ॥

ತನ್ನ ವೃತ್ತಿ ಮತ್ತು ಉದ್ಯಮಗಳಲ್ಲಿ ಬರುವ ಧನ–ಧಾನ್ಯಾದಿಗಳಲ್ಲಿ, ಶ್ರೀಕೃಷ್ಣನಿಗಾಗಿ ಹತ್ತನೆಯ ಒಂದಂಶವನ್ನು, ಶಕ್ತಿಯಿಲ್ಲದವರು ಇಪ್ಪತ್ತನೆಯ ಒಂದಂಶವನ್ನು ಸಮರ್ಪಿಸಬೇಕು. ॥ 147 ॥

ಇಷ್ಟಾರ್ಥವನ್ನು ಕೊಡಬಲ್ಲ ಏಕಾದಶೀ ಮೊದಲಾದ ವ್ರತಗಳ ಉದ್ಯಾಪನೆಯನ್ನು ಶಾಸ್ತ್ರೋಕ್ತ ರೀತಿಯಲ್ಲಿ ಯಥಾಶಕ್ತಿ ಮಾಡಬೇಕು. ॥ 148 ॥

ಶ್ರಾವಣ ಮಾಸದಲ್ಲಿ ಬಿಲ್ವಪತ್ರಾದಿಗಳಿಂದ ಈಶ್ವರ ಪೂಜೆಯನ್ನು ತಪ್ಪದೇ ಭಕ್ತಿಯಿಂದ ಮಾಡಬೇಕು ಅಥವಾ ತನಗೆ ಸಾಧ್ಯವಿಲ್ಲದಿದ್ದರೆ ಮಾಡಿಸಬೇಕು. ॥ 149 ॥

ತನ್ನ ಆಚಾರ್ಯ ಮತ್ತು ಭಗವನ್ಮಂದಿರಗಳಿಂದ ಸಾಲ ತೆಗೆದುಕೊಳ್ಳಬಾರದು. ಹಾಗೇ ಆ ಎರಡು ಕಡೆಯಿಂದ ವ್ಯಹಾರಕ್ಕಾಗಿ ಪಾತ್ರೆ, ಆಭರಣ, ವಸ್ತ್ರಾದಿಗಳನ್ನೂ ಎರವಲಾಗಿ ಪಡೆಯಬಾರದು. ॥ 150 ॥

ಭಗವನ್ಮಂದಿರ, ಗುರುಗಳು ಮತ್ತು ಸಾಧುಗಳ ದರ್ಶನಕ್ಕಾಗಿ ಹೋಗುವಾಗ ದಾರಿಯಲ್ಲಿ ಪರಾನ್ನವನ್ನು ಸ್ವೀಕರಿಸಬಾರದು. ಆ ಸ್ಥಾನಗಳಲ್ಲೂ ಪರಾನ್ನವನ್ನು ಸ್ವೀಕರಿಸಬಾರದು. ಪರಾನ್ನವು ತನ್ನ ಪುಣ್ಯವನ್ನು ನಾಶಮಾಡಿಬಿಡುತ್ತದೆ. ॥ 151 ॥

ಕೆಲಸ ಮಾಡುವವರಿಗೆ ಮಾತು ಕೊಟ್ಟ ಪ್ರಕಾರವೇ ದುಡ್ಡನ್ನು ಕೊಡಬೇಕು. ಋಣದ ವ್ಯವಹಾರ ಮತ್ತು ಋಣ ತೀರಿಸಿದ ವ್ಯವಹಾರವನ್ನು ಗುಟ್ಟಾಗಿ ಮಾಡಬಾರದು. ದುರ್ಜನರೊಂದಿಗೆ ಯಾವ ವ್ಯವಹಾರವನ್ನೂ ಮಾಡಬಾರದು. ॥ 152 ॥

ಕ್ಷಾಮಕಾಲ, ಶತ್ರುಗಳು ಮತ್ತು ರಾಜರು ಇವರ ತೊಂದರೆಯಿಂದ ತಾನಿದ್ದಲ್ಲಿ ಸಂಪೂರ್ಣ ಮಾನ ಮತ್ತು ಧನಹಾನಿಯಾಗುವುದಾದರೆ, ॥ 153 ॥

ತಾನು ಹುಟ್ಟಿ ಬೆಳೆದ ಮೂಲಸ್ಥಾನವಾದರೂ ಬುದ್ಧಿವಂತರಾದ ನನಗೆ ಸೇರಿದವರು ತತ್‌ಕ್ಷಣ ಆ ಸ್ಥಾನವನ್ನು ಬಿಟ್ಟು, ದೇಶಾಂತರದಲ್ಲಿ ಸುಖವಾದ ಸ್ಥಾನದಲ್ಲಿ ವಾಸಿಸಬೇಕು. ॥ 154 ॥

ಐಶ್ವರ್ಯವಂತರಾದ ಗೃಹಸ್ಥರು, ಅಹಿಂಸಾರೂಪವಾದ ವೈಷ್ಣವಯಾಗಗಳನ್ನು ಮಾಡಬೇಕು. ಅಂತಹವರು ಪುಣ್ಯತೀರ್ಥಗಳಲ್ಲಿ, ಪರ್ವಕಾಲಗಳಲ್ಲಿ ಬ್ರಾಹ್ಮಣರಿಗೂ ಸಾಧುಗಳಿಗೂ ಅನ್ನದಾನವನ್ನು ಮಾಡಬೇಕು. ॥ 155 ॥

ಮತ್ತೆ ಅವರು ಭಗವನ್ಮಂದಿರಗಳಲ್ಲಿ ಮಹೋತ್ಸವವನ್ನು ಮಾಡಿಸಬೇಕು. ಸತ್ಪಾತ್ರರಾದ ಬ್ರಾಹ್ಮಣರಿಗೆ ನಾನಾವಿಧ ದಾನಗಳನ್ನು ಮಾಡಬೇಕು. ॥ 156 ॥

ನನಗೆ ಸೇರಿದ ರಾಜರು ಧರ್ಮಶಾಸ್ತ್ರವನ್ನನುಸರಿಸಿ ತಮ್ಮ ಎಲ್ಲಾ ಪ್ರಜೆಗಳನ್ನು ತಮ್ಮ ಸ್ವಪುತ್ರರಂತೆ ರಕ್ಷಿಸಬೇಕು. ದೇಶದಲ್ಲಿ ಧರ್ಮವನ್ನು ಸ್ಥಾಪಿಸಬೇಕು. ॥ 157 ॥

ಹಾಗೆಯೇ ಅವರು ರಾಜನೀತಿಗಳಲ್ಲಿ ಹೇಳಿರುವ ಏಳು ವಿಧ ರಾಜ್ಯಾಂಗಗಳನ್ನು, ಸಾಮ–ದಾನಾದಿನಾಲ್ಕು ಉಪಾಯಗಳನ್ನು, ಸಂಧಿ–ವಿಗ್ರಹಾದಿ ಆರು ವರ್ಗಗಳನ್ನು, ಗೂಢಚಾರರು ಮುಂತಾದವರನ್ನು, ನ್ಯಾಯಸ್ಥಾನಾದಿಗಳನ್ನು, ಸಭೆಯ ಸದಸ್ಯರನ್ನು, ದಂಡನೆಗೆ ಅರ್ಹರು ಮತ್ತು ಅನರ್ಹರನ್ನು ಅವರವರ ಲಕ್ಷಣಾದಿಗಳಿಂದ ಸರಿಯಾಗಿ ತಿಳಿಯಬೇಕು. ॥ 158 ॥

ಸುಮಂಗಲಿಯರಾದ ಸ್ತ್ರೀಯರು ತಮ್ಮ ಪತಿಯನ್ನು ದೇವರಂತೆ ತಿಳಿದು ಸೇವೆ ಮಾಡಬೇಕು. ಪತಿಯು ಕುರುಡ, ರೋಗಿ, ದರಿದ್ರ, ಷಂಡ ಹೇಗಿದ್ದರೂ ಕೆಟ್ಟ ಮಾತುಗಳಾನ್ನಾಡಬಾರದು. ॥ 159 ॥

ಸತಿಯಾದ ಸ್ತ್ರೀಯರು ಸೌಂದರ್ಯ, ಯೌವನ, ಸದ್ಗುಣಾದಿಗಳಿಂದ ಕೂಡಿದ ಪರ ಪುರುಷರೊಂದಿಗೆ ಪಳಗಬಾರದು. ಆಕಸ್ಮಿಕವಾಗಿ ಪಳಗಬೇಕಾಗಿ ಬಂದರೂ ಅಡಿಗಡಿಗೆ ಪಳಗಬಾರದು. ॥ 160 ॥

ಸತಿಯು ಉತ್ತರೀಯ ರಹಿತಳಾಗಿ, ತನ್ನ ನಾಭಿ, ತೊಡೆ, ಕುಚಾದಿಗಳನ್ನು ಪರ ಪುರುಷರು ನೋಡುವಂತೆ ಇರಬಾರದು. ಮರ್ಯಾದೆ ಕೆಟ್ಟ ರೀತಿಯಲ್ಲಿ ನೋಡಬಾರದು. ॥ 161 ॥

ಪತಿಯು ದೇಶಾಂತರಕ್ಕೆ ಹೋಗಿದ್ದಾಗ ಸತಿಯು ಭೂಷಣ, ಒಳ್ಳೆಯ ವಸ್ತ್ರಾದಿಗಳನ್ನು ಧರಿಸಬಾರದು. ಮತ್ತೊಬ್ಬರ ಮನೆಯಲ್ಲಿ ಕುಳಿತಿರಬಾರದು. ಹಾಸ್ಯಾದಿಗಳನ್ನು ಮಾಡಬಾರದು. ॥ 162 ॥

ವಿಧವೆಯರಾದ ಸ್ತ್ರೀಯರು ಶ್ರೀಕೃಷ್ಣನೇ ಪತಿ ಎಂದು ಭಾವಿಸಿ ಅವನ ಸೇವೆಯನ್ನು ಮಾಡಬೇಕು. ತಂದೆ ಅಥವಾ ಪುತ್ರರ ಅಧೀನದಲ್ಲಿರಬೇಕು. ಸ್ವಾತಂತ್ರ್ಯ ವಹಿಸಬಾರದು. ॥ 163 ॥

ತನಗೆ ಅತ್ಯಂತ ಸಮೀಪ ಸಂಬಂಧವಿಲ್ಲದ ಪುರುಷರನ್ನು ಅವರು ಎಂದೂ ಮುಟ್ಟಬಾರದು. ತರುಣಿಯರಾದ ವಿಧವೆಯರು ತರುಣರಾದ ಪುರುಷರೊಂದಿಗೆ ಅನಿವಾರ್ಯತೆ ಇಲ್ಲದೇ ಮಾತನಾಡಬಾರದು. ॥ 164 ॥

ಹಾಲು ಕುಡಿಯುತ್ತಿರುವ ಶಿಶುವನ್ನು ಮುಟ್ಟಿದರೆ, ಹಸುಗಳನ್ನು ಮುಟ್ಟಿದಂತೆ ದೋಷವಿಲ್ಲ. ಅವಶ್ಯಕತೆಯಿಂದ ವೃದ್ಧರನ್ನು ಮುಟ್ಟುವುದರಲ್ಲೂ, ಮಾತನಾಡಿಸುವುದರಲ್ಲೂ ದೋಷವಿಲ್ಲ. ॥ 165 ॥

ಅತ್ಯಂತ ಸಮೀಪ ಸಂಬಂಧವಿಲ್ಲದ ಪುರುಷರಿಂದ ಅವರು ವಿದ್ಯಾಭ್ಯಾಸಾದಿಗಳನ್ನು ಮಾಡಬಾರದು. ಆಗಾಗ್ಗೆ ವ್ರತ, ಉಪವಾಸಾದಿಗಳಿಂದ ಶರೀರವನ್ನು ದಂಡಿಸಿಕೊಳ್ಳಬೇಕು. ॥ 166 ॥

ವಿಧವೆಯರು ತಮ್ಮ ದೇಹರಕ್ಷಣೆಗಾಗಿ ಇಟ್ಟುಕೊಂಡಿರುವ ಹಣವನ್ನು ದೇವತಾದಿ ಧರ್ಮಕಾರ್ಯಗಳಿಗೂ ಕೊಡಬಾರದು. ಹೆಚ್ಚಾಗಿದ್ದರೆ ಕೊಡಬಹುದು. ॥ 167 ॥

ಅವರು ದಿನಕ್ಕೆ ಒಂದೇ ಸಲ ಊಟ ಮಾಡಬೇಕು. ನೆಲದಲ್ಲೇ ಮಲಗಿಕೊಳ್ಳಬೇಕು. ಸಂಭೋಗನಿರತವಾದ ಪ್ರಾಣಿಯನ್ನು ನೋಡಬಾರದು. ॥ 168 ॥

ಅವರು ಸುಮಂಗಲಿಯರಂತೆ ವಸ್ತ್ರಾಲಂಕಾರಾದಿಗಳನ್ನು ಮಾಡಿಕೊಳ್ಳಬಾರದು. ಸನ್ಯಾಸಿನಿಯರ ವೇಷವನ್ನು ಧರಿಸಬಾರದು. ವಿಚಿತ್ರ ವೇಷಾದಿಗಳನ್ನು ಧರಿಸಬಾರದು. ॥ 169 ॥

ಗರ್ಭಪಾತ ಮಾಡಿಕೊಂಡವರೊಂದಿಗೆ ಮಾತಾಡಬಾರದು. ಅವರನ್ನು ಮುಟ್ಟಬಾರದು. ಪುರುಷರ ಶೃಂಗಾರದ ಮಾತುಗಳನ್ನಾಡಬಾರದು. ಕೇಳಲೂ ಬಾರದು. ॥ 170 ॥

ತರುಣಿಯರಾದ ವಿಧವೆಯರು, ಹತ್ತಿರದ ಬಂಧುಗಳು ತರುಣರಾಗಿದ್ದರೆ, ಅವರೊಂದಿಗೆ ಆಪತ್ಕಾಲವಿಲ್ಲದಿದ್ದಾಗ ಏಕಾಂತದಲ್ಲಿ ಇರಬಾರದು. ॥ 171 ॥

ಹಾಗೆಯೇ ಅವರ ಹೋಳಿ ಹಬ್ಬದಲ್ಲಿ ಸೇರಬಾರದು. ಭೂಷಣಗಳನ್ನು ಧರಿಸಬಾರದು. ಜರತಾರಿ ವಸ್ತ್ರಗಳನ್ನು ಎಂದೂ ಧರಿಸಬಾರದು. ॥ 172 ॥

ಸುಮಂಗಲಿಯರಾಗಲೀ, ವಿಧವೆಯರಾಗಲೀ ಬೆತ್ತಲೆಯಾಗಿ ಸ್ನಾನ ಮಾಡಬಾರದು. ರಜಸ್ವಲಾದೋಷ ಪ್ರಾಪ್ತವಾದಾಗ, ಅದನ್ನು ಮುಚ್ಚಿಟ್ಟುಕೊಳ್ಳಲೇಬಾರದು. ॥ 173 ॥

ರಜಸ್ವಲೆಯಾದ ಸ್ತ್ರೀ, ಮನುಷ್ಯರು ಮತ್ತು ವಸ್ತ್ರಾದಿಗಳನ್ನು ಮೂರು ದಿನಗಳವರೆಗೆ ಸ್ಪರ್ಶಿಸಬಾರದು. ನಾಲ್ಕನೆಯ ದಿನ ಸ್ನಾನ ಮಾಡಿದ ನಂತರ ಮುಟ್ಟಬಹುದು. ॥ 174 ॥

ನನಗೆ ಸೇರಿದ ನೈಷ್ಠಿಕ ಬ್ರಹ್ಮಚರ್ಯವ್ರತದಲ್ಲಿರುವವರು, ಬುದ್ಧಿಪೂರ್ವಕವಾಗಿ ಸ್ತ್ರೀಯರನ್ನು ನೋಡಬಾರದು. ಸಂಭಾಷಿಸಬಾರದು. ಮುಟ್ಟಲೂಬಾರದು. ॥ 175 ॥

ಅವರು ಸ್ತ್ರೀಯರ ಸಂಬಂಧವಾದ ಮಾತನ್ನು ಆಡಲೂಬಾರದು, ಕೇಳಲೂ ಬಾರದು. ಸ್ತ್ರೀಯರು ಓಡಾಡುವ ಸ್ಥಳಗಳಲ್ಲಿ ಸ್ನಾನಾದಿಗಳನ್ನು ಮಾಡಬಾರದು. ॥ 176 ॥

ಸ್ತ್ರೀದೇವತೆಗಳ ವಿಗ್ರಹವನ್ನು ಬಿಟ್ಟು ಉಳಿದ ಸ್ತ್ರೀಯರ ಚಿತ್ರಗಳನ್ನಾಗಲೀ, ಪ್ರತಿಮೆಗಳನ್ನಾಗಲೀ ಬುದ್ಧಿಪೂರ್ವಕವಾಗಿ ಅವರು ನೋಡಲೂ ಬಾರದು, ಮುಟ್ಟಲೂಬಾರದು. ॥ 177 ॥

ಅವರು ಸ್ತ್ರೀಯರ ಪ್ರತಿಮೆಗಳನ್ನು ಮಾಡಬಾರದು. ಸ್ತ್ರೀಯರ ವಸ್ತ್ರಾದಿಗಳನ್ನು ಮುಟ್ಟಬಾರದು. ಸಂಗದಲ್ಲಿರುವ ಸ್ತ್ರೀ–ಪುರುಷ ಪ್ರಾಣಿಗಳನ್ನು ಬುದ್ಧಿಪೂರ್ವಕವಾಗಿ ನೋಡಬಾರದು. ॥ 178 ॥

ಸ್ತ್ರೀವೇಷ ಧರಿಸಿದ ಪುರುಷರನ್ನು ಮುಟ್ಟಬಾರದು. ನೋಡಲೂ ಬಾರದು. ಸ್ತ್ರೀಯರನ್ನು ಉದ್ದೇಶಿಸಿ ಭಗವದ್ಗುಣಗಾನವನ್ನು ಮಾಡಬಾರದು. ॥ 179 ॥

ಬ್ರಹ್ಮಚರ್ಯವ್ರತಕ್ಕೆ ಭಂಗ ತರುವಂತಹ ಮಾತುಗಳು ಗುರುವಿನಿಂದ ಹೊರಬಂದರೂ ಅದನ್ನು ಕೇಳಬಾರದು. ಸದಾ ಧೀರರಾಗಿ, ಸಂತುಷ್ಟರಾಗಿ ಗರ್ವರಹಿತರಾಗಿ ಅವರು ಇರಬೇಕು. ॥ 180 ॥

ತನ್ನ ಅತ್ಯಂತ ಸಮೀಪಕ್ಕೆ ಹಠದಿಂದ ಬರುವ ಸ್ತ್ರೀಯರನ್ನು ತೀಕ್ಷ್ಣಮಾತುಗಳಿಂದ ತತ್‌ಕ್ಷಣ ತಿರಸ್ಕರಿಸಿ ತಡೆಯಬೇಕು. ॥ 181 ॥

ಒಬ್ಬ ಸ್ತ್ರೀಗೆ ಅಥವಾ ತನಗೆ ಅಥವಾ ತನಗೆ ಸೇರಿದವರಿಗೆ ಪ್ರಾಣಾಪಾಯ ಸಂಭವ ಬಂದಾಗ, ಸ್ತ್ರೀಯರೊಂದಿಗೆ ಮಾತಾಡುವುದು ಮತ್ತು ಸ್ಪರ್ಶಿಸುವುದು ದೋಷವಲ್ಲ. ॥ 182 ॥

ತೈಲಾಭ್ಯಂಜನವನ್ನು ಬ್ರಹ್ಮಚಾರಿಗಳು ಮಾಡಬಾರದು. ಆಯುಧವನ್ನು ಧರಿಸಬಾರದು. ವಿಕಾರವಾದ ಅಲಂಕಾರಾದಿಗಳನ್ನು ಮಾಡಿಕೊಳ್ಳಬಾರದು. ಜಿಹ್ವೆಯ ಚಾಪಲ್ಯವನ್ನು ಜಯಿಸಬೇಕು. ॥ 183 ॥

ಬ್ರಾಹ್ಮಣರ ಮನೆಯಲ್ಲಾದರೂ, ಸ್ತ್ರೀಯರು ಬಡಿಸುವುದಾದರೆ ಅಲ್ಲಿ ಊಟ ಮಾಡಬಾರದು. ಅದನ್ನು ಬಿಟ್ಟು ಬೇರೆಡೆಗೆ ಹೋಗಿ ಭಿಕ್ಷೆಯನ್ನು ಸ್ವೀಕರಿಸಬೇಕು. ॥ 184 ॥

ಅವರು ವೇದ-ಶಾಸ್ತ್ರಗಳನ್ನು ಅಭ್ಯಸಿಸಬೇಕು. ಗುರು ಶುಶ್ರೂಷೆಯನ್ನು ಮಾಡಬೇಕು. ಸ್ತ್ರೀಯರ ಸಂಬಂಧದಂತೆಯೇ ಸ್ತ್ರೀಯರ ಸಂಬಂಧವುಳ್ಳವರ ಸಂಬಂಧವನ್ನೂ ಬಿಡಬೇಕು.

॥ 185 ॥

ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವನು ಚರ್ಮದ ಚೀಲಗಳಲ್ಲಿ ತಂದ ನೀರನ್ನು ಕುಡಿಯಬಾರದು. ಈರುಳ್ಳಿ, ಬೆಳ್ಳುಳ್ಳಿ ಮುಂತಾದವನ್ನು ಸರ್ವಥಾ ತಿನ್ನಬಾರದು. ॥ 186 ॥

ಸ್ನಾನ, ಸಂಧ್ಯಾವಂದನೆ, ಗಾಯತ್ರೀಜಪ, ವಿಷ್ಣುಪೂಜೆ, ವೈಶ್ವದೇವ ಇವುಗಳನ್ನು ಮಾಡದೇ ಭೋಜನ ಮಾಡಬಾರದು. ॥ 187 ॥

ಸಾಧುಗಳಾದ ಎಲ್ಲರೂ ಸಹ, ನೈಷ್ಠಿಕ ಬ್ರಹ್ಮಚಾರಿಗಳಂತೆಯೇ ಸ್ತ್ರೀಯರು ಮತ್ತು ಸ್ತ್ರೀಸಕ್ತರು ಇವರ ಸಂಗವನ್ನೂ ಮಾಡಬಾರದು. ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳೆಂಬ ಅಂತಶ್ಶತ್ರುಗಳನ್ನು ಜಯಿಸಬೇಕು. ॥ 188 ॥

ಎಲ್ಲ ಇಂದ್ರಿಯಗಳನ್ನು ವಿಶೇಷವಾಗಿ ಜಿಹ್ವೆಯನ್ನು ಜಯಿಸಬೇಕು. ಧನಾದಿಗಳನ್ನು ಸಂಗ್ರಹಿಸಿಡಬಾರದು. ಮತ್ತೊಬ್ಬರನ್ನೂ ಅದರಲ್ಲಿ ಪ್ರೇರೇಪಿಸಬಾರದು. ॥ 189 ॥

ಮತ್ತೊಬ್ಬರ ವಸ್ತುವನ್ನು ರಕ್ಷಣೆಗಾಗಿ ಇಟ್ಟುಕೊಳ್ಳಬಾರದು. ಧೈರ್ಯವನ್ನು ಎಂದೂ ಕೈಬಿಡಬಾರದು. ತನ್ನ ವಾಸಸ್ಥಾನದಲ್ಲಿ ಎಂದೂ ಸ್ತ್ರೀಯರನ್ನು ಒಳಗೆ ಸೇರಿಸಿಕೊಳ್ಳಬಾರದು. ॥ 190 ॥

ರಾತ್ರಿಯಲ್ಲಿ ಅತ್ಯಂತ ಅನಿವಾರ್ಯತೆ ಇಲ್ಲದಿದ್ದಲ್ಲಿ, ಜೊತೆಯವರಿಲ್ಲದೇ ಎಲ್ಲಿಗೂ ಓಡಾಡಬಾರದು. ಹಾಗೆಯೇ ಅನಿವಾರ್ಯತೆ ಇಲ್ಲದಿದ್ದಾಗ ಒಬ್ಬರಾಗಿ ಎಲ್ಲಿಗೂ ಹೋಗಬಾರದು. ॥ 191 ॥

ಅಮೂಲ್ಯವಾದ ವಿಚಿತ್ರ ವಸ್ತ್ರಗಳನ್ನೂ, ಆಕರ್ಷಕ ಬಣ್ಣವುಳ್ಳ ವಸ್ತ್ರಗಳನ್ನೂ, ಅಮೂಲ್ಯ ವಸ್ತ್ರಗಳನ್ನೂ ಮತ್ತೊಬ್ಬರು ಪ್ರೀತಿಯಿಂದ ಕೊಟ್ಟಿದ್ದರೂ ಧರಿಸಬಾರದು. ॥ 192 ॥

ಭಿಕ್ಷೆ ಅಥವಾ ಸಭಾಪ್ರಸಂಗ ಬಿಟ್ಟು ಉಳಿದ ಸಮಯದಲ್ಲಿ ಗೃಹಸ್ಥರ ಮನೆಗೆ ಹೋಗಬಾರದು. ಭಗವಚ್ಚಿಂತನೆಯಿಲ್ಲದೇ ವ್ಯರ್ಥವಾಗಿ ಕಾಲವನ್ನು ಕಳೆಯಬಾರದು. ॥ 193 ॥

ಯಾವ ಗೃಹಸ್ಥರ ಮನೆಯಲ್ಲಿ ಪುರುಷರೇ ಅಡುಗೆ ಮಾಡಿ ಬಡಿಸುವರೋ, ಸ್ತ್ರೀಯರ ದರ್ಶನಾದಿಗಳಿಗೆ ಸರ್ವಥಾ ಅವಕಾಶವೇ ಇರುವುದಿಲ್ಲವೋ, ॥ 194 ॥

ಅಂತಹ ಮನೆಯಲ್ಲಿ ಮಾತ್ರವೇ ನನಗೆ ಸೇರಿದ ಸಾಧುಗಳು ಭೋಜನಕ್ಕೆ ಹೋಗಬಹುದು. ಇದು ಸಾಧ್ಯವಾಗದಿದ್ದರೆ, ಅವರಿಂದ ಅಡುಗೆಯ ಸಾಮಾನುಗಳನ್ನು ಪಡೆದು, ತಾವೇ ಸ್ವಂತವಾಗಿ ಅಡಿಗೆ ಮಾಡಿಕೊಳ್ಳಬೇಕು. ॥ 195 ॥

ಋಷಭದೇವನ ಪುತ್ರನಾದ ಜಡಭರತನು ಈ ಭೂಮಿಯಲ್ಲಿ ಹೇಗೆ ಇದ್ದನೋ, ನನಗೆ ಸೇರಿದ ಸಾಧುಗಳು, ಅಂತಹ ಪರಮಹಂಸ ವೃತ್ತಿಯಲ್ಲಿ ಇರಬೇಕು. ॥ 196 ॥

ನನಗೆ ಸೇರಿದ ಬ್ರಹ್ಮಚಾರಿಗಳು ಮತ್ತು ಸಾಧುಗಳು ಪ್ರಯತ್ನಪೂರ್ವಕವಾಗಿಯೇ, ತಾಂಬೂಲ, ಅಫೀಮು, ತಂಬಾಕು ಮುಂತಾದವನ್ನು ಪೂರ್ಣವಾಗಿ ಬಿಡಬೇಕು. ॥ 197 ॥

ಗರ್ಭಾಧಾನ ಮೊದಲಾದ ಸಂಸ್ಕಾರಕ್ಕೆ ಸೇರಿದ ಭೋಜವನ್ನು ಅವರು ಸ್ವೀಕರಿಸಬಾರದು. ಎಲ್ಲಾ ವಿಧವಾದ ಪ್ರೇತಶ್ರಾದ್ಧಗಳಲ್ಲೂ, ಸಪಿಂಡೀಕರಣಾದಿ ಶ್ರಾದ್ಧಗಳಲ್ಲೂ ಅವರು ಭುಂಜಿಸಬಾರದು. ॥ 198 ॥

ರೋಗಾದಿ ಅನಿವಾರ್ಯತೆ ಇಲ್ಲದಿದ್ದಾಗ ಹಗಲು ಅವರು ನಿದ್ರಿಸಬಾರದು. ಕೆಳದರ್ಜೆಯ ಮಾತುಗಳನ್ನು ಆಡಬಾರದು ಮತ್ತು ಬುದ್ಧಿಪೂರ್ವಕವಾಗಿ ಕೇಳಬಾರದು. ॥ 199 ॥

ಅವರು ರೋಗಾದಿ ಕಾರಣವಿಲ್ಲದೇ ಮಂಚದಲ್ಲಿ ಮಲಗಬಾರದು. ಸಾಧುಸಂತರ ಮಧ್ಯದಲ್ಲಿ ನಿಷ್ಕಪಟದಿಂದ ನಡೆದುಕೊಳ್ಳಬೇಕು. ॥ 200 ॥

ದುರ್ಜನರು ಸಾಧುಗಳನ್ನು ನಿಂದಿಸಿದರೆ ಮತ್ತು ಹೊಡೆದರೆ, ಸಾಧುಗಳು ಸಹನೆಯಿಂದ ಇದ್ದು, ಅವರಿಗೆ ಹಿತವನ್ನೇ ಚಿಂತಿಸಬೇಕು. ॥ 201 ॥

ದೂತನ ಕಾರ್ಯ, ಚಾಡಿ ಹೇಳುವುದು, ಗೂಢಚರ್ಯೆ, ಶರೀರಾತ್ಮಾಭಿಮಾನ, ತನ್ನ ಬಂಧುಗಳಲ್ಲಿ ಮಮತೆ ಇತ್ಯಾದಿಗಳನ್ನು ಸಾಧುಗಳು ತ್ಯಜಿಸಬೇಕು. ॥ 202 ॥

ಹೀಗೆ ಸಂಗ್ರಹವಾಗಿ ಎಲ್ಲರಿಗೂ ಬೇಕಾದ ಧರ್ಮವನ್ನು ಹೇಳಲಾಯಿತು. ಇವುಗಳ ವಿಸ್ತಾರವನ್ನು ಮೂಲಗ್ರಂಥಗಳಿಂದ ತಿಳಿಯಬೇಕು. ॥ 203 ॥

ಸಚ್ಛಿಷ್ಯರ ಶಿಕ್ಷಣಕ್ಕಾಗಿ ಅವರಿಗೆ ಸರ್ವಾಭೀಷ್ಟ ಪ್ರಾಪ್ತಿಯಾಗಿ ಸಕಲ ಶಾಸ್ತ್ರಗಳ ಸಾರವನ್ನು ಸಂಗ್ರಹಿಸಿ, ನಾನು ಈ ಶಿಕ್ಷಾಪತ್ರಿಯನ್ನು ಬರೆದಿರುವೆನು. ॥ 204 ॥

ನನಗೆ ಸೇರಿದವರೆಲ್ಲರೂ ಇದರಂತೆ ತಮ್ಮ ನಿತ್ಯ ಕರ್ತವ್ಯಾದಿಗಳನ್ನು ತಿಳಿದು, ಸಂಯಮ ಜೀವನವನ್ನು ನಡೆಸಬೇಕು. ಸ್ವೇಚ್ಛಾಚಾರಿಗಳಾಗಿ ಎಂದೂ ಇರಬಾರದು. ॥ 205 ॥

ಇದರಂತೆ ನಡೆಯುವ ಪುರುಷರು ಅಥವಾ ಸ್ತ್ರೀಯರು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಎಲ್ಲ ಪುರುಷಾರ್ಥಗಳನ್ನು ಖಂಡಿತವಾಗಿ ಪಡೆಯುವರು. ॥ 206 ॥

ಯಾರು ಇದರಂತೆ ನಡೆಯುವುದಿಲ್ಲವೋ, ಅವರು ನಮ್ಮ ಸಂಪ್ರದಾಯಕ್ಕೆ ಸೇರದೇ, ಹೊರಗಿನವರೆಂದು ನನಗೆ ಸೇರಿದ ಸಂಪ್ರದಾಯಸ್ಥರು ತಿಳಿಯತಕ್ಕದ್ದು. ॥ 207 ॥

ನನಗೆ ಸೇರಿದವರು ಪ್ರತಿದಿನವೂ ಈ ಶಿಕ್ಷಾಪತ್ರಿಯನ್ನು ಓದಬೇಕು. ಓದಲು ತಿಳಿಯದವರು ಮತ್ತೊಬ್ಬರು ಓದುವಾಗ ಶ್ರದ್ಧೆಯಿಂದ ಕೇಳಬೇಕು. ॥ 208 ॥

ಕೇಳಲೂ ಅವಕಾಶ ದೊರೆಯದವರು, ನನ್ನ ವಾಣಿಯಾದ ಇದನ್ನು 'ನಾನೇ' ಎಂದು ತಿಳಿದು, ಪ್ರತಿದಿನವೂ ಶ್ರದ್ಧಾ-ಭಕ್ತ್ಯಾದಿಗಳಿಂದ ಪೂಜಿಸಬೇಕು. ॥ 209 ॥

ದೈವೀಸಂಪತ್ತಿನಿಂದ ಕೂಡಿದವರಿಗೆ ಮಾತ್ರವೇ ಈ ಶಿಕ್ಷಾಪತ್ರಿಯನ್ನು ಕೊಡಬೇಕು. ಆಸುರೀ ಸಂಪತ್ತಿನಿಂದ ಕೂಡಿದವರಿಗೆ ಇದನ್ನು ಎಂದೂ ಕೊಡಬಾರದು. ॥ 210 ॥

1882 ನೆಯ ವಿಕ್ರಮ ಶಕೆಯ ವಸಂತೋತ್ಸವದ ಮೊದಲನೆಯ ದಿನದಲ್ಲಿ (ವಸಂತ ಪಂಚಮೀ ಎಂದು ಪ್ರಸಿದ್ಧವಾದ, ಮಾಘ ಶುಕ್ಲ ಪಂಚಮೀ) ಮಂಗಳರೂಪವಾದ ಈ ಶಿಕ್ಷಾಪತ್ರಿಯು ಬರೆಯಲ್ಪಟ್ಟಿತು. ॥ 211 ॥

ತನ್ನನ್ನು ಆಶ್ರಯಿಸಿದವರ ಸಕಲ ಕಷ್ಟಗಳನ್ನು ಪರಿಹರಿಸುವ, ಧರ್ಮದಿಂದ ಕೂಡಿದ ಭಕ್ತಿಯನ್ನು ಲೋಕದಲ್ಲಿ ಸಂರಕ್ಷಿಸುವ, ಭಕ್ತರಿಗೆ ಸರ್ವಾಭೀಷ್ಟಸುಖಗಳನ್ನು ಕರುಣಿಸುವ ಶ್ರೀಕೃಷ್ಣನು ಎಲ್ಲರಿಗೂ ಮಂಗಳವನ್ನು ಕರುಣಿಸಲಿ. ॥ 212 ॥

॥ ಇತಿ ಶ್ರೀಸಹಜಾನಂದಸ್ವಾಮಿಯಿಂದ ರಚಿಸಲ್ಪಟ್ಟ ಶಿಕ್ಷಾಪತ್ರೀಯು ಸಮಾಪ್ತಿಯಾಯಿತು. ॥